ಕ್ಷರಾವಸ್ಯೋಗಾಣ

ಅಪ್ರಂಬಕ

1953

ಶ್ರೀ ರಾಮಕೃಷ್ಣ

ಶ್ರೀ ರಾಮಕೃಷ್ಣ

(ಸಂಕ್ಷಿಪ್ತ ಜೀವನ)



ಪ್ರಕಾಶಕರು :

ಶ್ರೀ ರಾಮಕೃಷ್ಣಾಶ್ರಮ

ಮೈಸೂರು.

ಬೆಲೆ ೦-೫-೦

ಶ್ರೀ ರಾಮಕೃಷ್ಣ

(ಸಂಕ್ಷಿಪ್ತ ಜೀವನ)

ಪ್ರಕಾಶಕರು :

ಶ್ರೀ ರಾಮಕೃಷ್ಣಾಶ್ರಮ

ಮೈಸೂರು.

ಬೆಲೆ ೦-೫-೦

1953

ಮುದ್ರಕರು
ಹಿಂದೂಸ್ಥಾನ್ ಪ್ರೆಸ್, ಮೈಸೂರು

ಶ್ರೀ ರಾಮಕೃಷ್ಣ

ಕ್ರಿ.ಶ. ೧೮೫೬. ಸಿಪಾಯಿದಂಗೆ ಮೋಡಗಳು ಭರತಖಂಡವನ್ನು ಕ್ರಮೇಣ ಮುತ್ತುತ್ತಿವೆ. ಭರತಖಂಡದಲ್ಲಿ ಎಲ್ಲೆಲ್ಲೂ ಆಂದೋಳನ; ಅತೃಪ್ತಿ ಕುದಿಯುತ್ತಿದೆ. ರಾಜಕೀಯ ಕ್ಷೇತ್ರದಲ್ಲೂ ದೊಡ್ಡದೊಂದು ಬಿರುಗಾಳಿ ಏಳುವುದಕ್ಕೆ ಸನ್ನಾಹವಾಗುತ್ತಿದೆ. ಅದೇ ಸಮಯ ಗಂಗಾನದಿ ತೀರದ ದಕ್ಷಿಣೇಶ್ವರ ದೇವಾಲಯದ ಸಮೀಪದಲ್ಲಿ ಪ್ರತಿದಿನವೂ ಸುಮಾರು ಇಪ್ಪತ್ತು ವರುಷದ ಯುವಕ ಸಂಜೆ ಹೊತ್ತು ದೇವಾಲಯದಿಂದ ಹೊರಗೆ ಬರುವನು. ಗಂಗಾನದಿಯ ಆಚೆ ತೀರದೆಡೆ ಮುಳುಗುತ್ತಿರುವ ರವಿಯನ್ನು ನೋಡುವನು. ನಿಟ್ಟುಸಿರು ಬಿಡುವನು. “ಅಯ್ಯೊ ನನ್ನ ಜೀವನದಲ್ಲೂ ಆಗಲೇ ಒಂದು ದಿನ ಹೋಯಿತು. ಇನ್ನೂ ತಾಯಿ ಕಾಣಲಿಲ್ಲ” ಎಂದು ಕಂಬನಿದುಂಬಿ ಅಳುವನು. ನೆಲದಮೇಲೆ ಬಿದ್ದು ಹೊರಳಾಡುವನು. ನದಿಗೆ ಬಂದವರು ಹಿಂತಿರುಗಿ ಹೋಗುವಾಗ ಈ ದೃಶ್ಯವನ್ನು ನೋಡಿ, “ಅಯ್ಯೊ ಪಾಪ, ಈ ಹುಡುಗ ಹೆತ್ತತಾಯಿಗೆ ಅಳುತ್ತಿರುವನೇನೊ” ಎಂದು ಸಹಾನುಭೂತಿ ತೋರಿ ಮುಂದೆ ಸಾಗುವರು.

ಎಳೆ ಮಗು ಮರೆಯಾದ ತಾಯಿಗೆ ಎಷ್ಟು ಅಳುವುದೊ ಅಷ್ಟು ಆತ್ತರು ಜಗನ್ಮಾತೆಗೆ. ಅನುಮಾನಾಸ್ಪದವಾದ, ಕಣ್ಣಿಗೆ ಕಾಣದ ದೇವರಿಗಾಗಿ ಅಷ್ಟು ವ್ಯಥೆಪಟ್ಟವರು ಅಪರೂಪ ಧಾರ್ಮಿಕ ಜೀವನದಲ್ಲಿ. ಕೊನೆಗೆ ನಿರಾಶರಾಗಿ ಗರ್ಭಗುಡಿಯ ಮುಂದೆ ಬಲಿಕೊಡುವ ಖಡ್ಗವನ್ನು ತೆಗೆದುಕೊಂಡು ದೇವರೆದುರಿಗೆ ತಮ್ಮ ರುಂಡವನ್ನು ಈಡಾಡುವುದರಲ್ಲಿದ್ದರು. ತಕ್ಷಣ ದೇವಿ ಪ್ರತ್ಯಕ್ಷಳಾದಳು. ಯುವಕನ ಮನಸ್ಸು ಪ್ರಪಂಚವನ್ನು ತೊರೆದು ಅವರ್ಣನೀಯ ಆನಂದದಲ್ಲಿ ತಲ್ಲೀನವಾಯಿತು. ದೇವರು ಪರೀಕ್ಷಿಸುವನು. ನಮ್ಮ ಸರ್ವಸ್ವವನ್ನೂ ತೆತ್ತಲ್ಲದೆ ಬರುವುದಿಲ್ಲ. ನಮ್ಮೆಲ್ಲವನ್ನೂ ದೇವರಿಗೆ ಕೊಟ್ಟರೆ ದೇವರು ತನ್ನ ಎಲ್ಲವನ್ನೂ ಭಕ್ತನಿಗೆ ಕೊಡುವನು. ತನ್ನ ಇಡೀ ಜೀವನವನ್ನು ನಿವೇದಿಸಿ, ಜಗನ್ಮಾತೆಯನ್ನು ಪಡೆದುಕೊಂಡರು. ಈ ವ್ಯಕ್ತಿಯೇ ಮುಂದೆ ಜಗದ್ವಂದ್ಯ ಶ್ರೀರಾಮಕೃಷ್ಣ ಪರಮಹಂಸರಾದುದು.

ಸ್ವಾಮಿ ವಿವೇಕಾನಂದರು ಹೇಳಿರುವಂತೆ ಪರಮಹಂಸರ ಜೀವನ ವೇದವೇದಾಂತಗಳಿಗೆ ಬರೆದಿರುವ ಸಚೇತನ ಭಾಷ್ಯ. ಮೂವತ್ತುಕೋಟಿ ಭಾರತೀಯರ ಎರಡು ಸಾವಿರ ವರುಷಗಳ ಜೀವನವನ್ನು ಇವರು ತಮ್ಮ

ಒಂದು ಜೀವನದಲ್ಲಿ ಅಳವಡಿಸಿಕೊಂಡಿರುವರು. ಇವರ ಜೀವನ ದ್ವೈ
ಅದ್ವೈತ ವಿಶಿಷ್ಟ ಅದ್ವೈತಗಳ ತ್ರಿವೇಣೀ. ಭಗವಂತನನ್ನು ಹಲವಾ
ಭಾವಗಳಲ್ಲಿ ಕಂಡು ಪ್ರೀತಿಸಿದರು. ಜ್ಞಾನ, ಭಕ್ತಿ, ಯೋಗ, ಇ
ಸಂಧಿಸಿವೆ. ಇವರ ಜೀವನವೆ ಒಂದು ದೊಡ್ಡ ವಿಶ್ವಧರ್ಮ ಸಮ್ಮೇಳನ
ಹೊರಗೆ ನೋಡುವುದಕ್ಕೆ ಎಳೆನಗೆ ಸರ್ವದಾ ಇವರ ಮುಖದಲ್ಲಿ ಚಿಮ್ಮುತ್ತಿ
ಆದರ ಹಿಂದೆ ರೋಮಾಂಚನಕಾರಿಯಾದ ಆಧ್ಯಾತ್ಮಿಕ ಘಟನಾವಳಿ ತುಂ
ತುಳುಕಾಡುತ್ತಿವೆ.

ಇವರು ಘನ ವಿದ್ವಾಂಸರ ಗುಂಪಿಗೆ ಸೇರಿದವರಲ್ಲ. ದೊಡ್ಡ ವಾ
ಗಳಲ್ಲ. ಉಪನ್ಯಾಸ ಕೊಡುವುದಕ್ಕೆ ಎಲ್ಲೂ ಹೊರಗೆ ಹೋಗಲಿಲ್ಲ. ತವ
ಬಾಳನ್ನೆಲ್ಲ ಬಹುಪಾಲು ದಕ್ಷಿಣೇಶ್ವರ ದೇವಾಲಯದ ವಲಯದ
ಕಳೆದರು. ಆದರೂ ಅಪರೂಪವಾಗಿ ಅರಳಿದ ಸಹಸ್ರದಳ ಕಮಲವಿದ
ಇಡೀ ಬದ್ಧಜೀವಿಗಳ ಉದ್ಧಾರಕ್ಕೆ ಬೇಕಾಗುವ ಧರ್ಮಾಮೃತ ಅ
ಹುದುಗಿತ್ತು. ಹಲವಾರು ಕಡೆಯಿಂದ ದುಂಬಿಗಳು ಬಂದವು. ಮಕರಂ
ವನ್ನು ಹೀರಿ ತೃಪ್ತರಾದವು. ಅದನ್ನು ಉಳಿದವರಿಗೆಲ್ಲ ಹಂಚಿ ಧನ
ರಾದವು. ಪಾಶ್ಚಾತ್ಯ ದೇಶಗಳಿಗೂ ಹಂಚಿ ಭರತಖಂಡಕ್ಕೆ ಮಾನ್ಯ
ತಂದವು.

ಚಿರಾಯುವಾದ ಭರತಮಾತೆಯ ಶ್ರೇಷ್ಠತಮ ಪುತ್ರರಲ್ಲಿ ಶ್ರೀರಾ
ಕೃಷ್ಣ ಪರಮಹಂಸರೊಬ್ಬರು.

ಬಂಗಾಳ ಪ್ರಾಂತ್ಯದಲ್ಲಿ ಹೂಗ್ಲಿ ಜಿಲ್ಲೆಯಲ್ಲಿ ಕಾಮಾರಪುಕುರವೆಂ
ಸಣ್ಣದೊಂದು ಗ್ರಾಮ. ಕಲ್ಕತ್ತೆಯಿಂದ ಸುಮಾರು ಅರವತ್ತು ಮೈ
ದೂರದಲ್ಲಿತ್ತು. ಈಗಿನ ಕಾಲದ ವಾಹನಸೌಕರ್ಯಗಳಾವುವೂ ಅಲ್ಲಿಗೆ ಇನ
ಬಂದಿರಲಿಲ್ಲ. ಹತ್ತಿರದ ರೈಲ್ವೆ ಸ್ಟೇಷನ್ನಿಗೆ ಸುಮಾರು ಇಪ್ಪತ್ತೈದು ಮೈ
ಹಳ್ಳಿ ಸಣ್ಣದು. ಆದರೂ ಜನರು ನೆಮ್ಮದಿಯಾಗಿದ್ದರು. ಸುತ್ತಮುತ್ತಲ
ಕಮಲಪುಷ್ಕರಣಿ, ತೋಪು, ಇವುಗಳ ಹಿಂದೆ ಹಸರು ಗದ್ದೆಯ ಬಯಲ
ಅಲ್ಲಿ ಖುದಿರಾಮಚಟ್ಟೋಪಾಧ್ಯಾಯ ಮತ್ತು ಚಂದ್ರಮಣಿದೇವಿ ಎಂ
ಬ್ರಾಹ್ಮಣ ಕುಟುಂಬವಿತ್ತು. ಬಡವರಾದರೂ ದೊಡ್ಡ ದೈವಭಕ್ತರ
ಯಾವ ಅಧಿಕಾರ ಇವರಿಗೆ ಇಲ್ಲದೇ ಇದ್ದರೂ ಜನರು ಇವರ ಜೀವ
ಗಾಂಭೀರ್ಯದೆದುರಿಗೆ ತಗ್ಗಿ ನಡೆಯುತ್ತಿದ್ದರು. ಭಕ್ತರು, ಪರೋಪಕಾ
ಗಳು ಎಂದು ಪ್ರಖ್ಯಾತರಾಗಿದ್ದರು. ಇವರಿಗೆ ಕ್ರಿ.ಶ. ೧೮೩೬ನೇ ಫೆಬ್ರವ
೧೮ನೇ ದಿನ ಹುಟ್ಟಿದ ನಾಲ್ಕನೆಯ ಮಗನೆ ಶ್ರೀರಾಮಕೃಷ್ಣ. ಮಗು ಹು

ದಾಗ ಗದಾಧರನೆಂದು ನಾಮಕರಣಮಾಡಿ ಕ್ರಮೇಣ ಶ್ರೀರಾಮಕೃಷ್ಣರೆಂಬ ಹೆಸರು ಅವರಿಗೆ ಸೇರಿ, ನಂತರ, ಕೊನೆಯದೇ ಪ್ರಖ್ಯಾತವಾಗಿ ನಿಂತಿತು.

ಮಗುವು ಮನೆಯವರಿಗೆ ಮಾತ್ರ ಮುದ್ದಾಗಿ ಇರಲಿಲ್ಲ: ಇಡೀ ಹಳ್ಳಿಯೆ ಆ ಮಗುವನ್ನು ನೋಡಿ ಸಂತೋಷಗೊಂಡಿತು. ಎಲ್ಲರಿಗೂ ಬೇಕಾದ ಮಗುವಾಯಿತು. ಮಗುವಿಗೆ ಸುಮಾರು ಐದು ಆರನೆ ವರ್ಷ ತುಂಬುವ ಹೊತ್ತಿಗೆ, ದೇವದೇವಿಯರಿಗೆ ಹಲವು ಸ್ತೋತ್ರಗಳು, ರಾಮಾಯಣ ಮಹಾಭಾರತದ ಕಥೆ ಇವನ್ನು ಕಲಿತುಕೊಂಡಿತು.

ಬಾಲ್ಯದಿಂದಲೂ ಅವರಲ್ಲಿ ಕೆಲವು ಸ್ವಭಾವ ಬಹಳ ಚೆನ್ನಾಗಿ ರೂಪುಗೊಳ್ಳುತ್ತಿತ್ತು. ಸ್ವಲ್ಪವೂ ಅಂಜಿಕೆ ಸ್ವಭಾವದವರಲ್ಲ. ಉಳಿದ ಮಕ್ಕಳು ಎಲ್ಲಿಗೆ ಹೋಗುವುದಕ್ಕೆ ಅಂಜುತ್ತಿದ್ದರೋ ಅಲ್ಲಿಗೆ ಧೈರ್ಯವಾಗಿ ಹೋಗುತ್ತಿದ್ದರು. ಸ್ಮಶಾನ ಸಾಧಾರಣ ಎಂತಹವನಿಗಾದರೂ ಸ್ವಲ್ಪ ಅಂಜಿಕೆ ಕೊಡುವಸ್ಥಳ. ಅಂತಹ ಕಡೆ ಒಬ್ಬರೇ ನಿರ್ಭಯವಾಗಿ ಹೋಗುತ್ತಿದ್ದರು. ಯಾರೂ ಇವರಿಗೆ ಇಚ್ಛೆ ಇಲ್ಲದುದನ್ನು ಕೋಪದಿಂದ ಅಥವಾ ಅಂಜಿಸಿ ಮಾಡಿಸುವುದಕ್ಕೆ ಆಗುತ್ತಿರಲಿಲ್ಲ. ಯಾರಿಗಾದರೂ ಒಮ್ಮೆ ಮಾತು ಕೊಟ್ಟರೆ ಸಾಕು, ಏನಾದರೂ ಆಗಲಿ ಅದನ್ನು ನಡೆಸಿಕೊಡುತ್ತಿದ್ದರು. ಉಪನಯನದ ಸಮಯದಲ್ಲಿ ಮೊದಲ ಭಿಕ್ಷವನ್ನು ಅವರ ಕುಲಕ್ಕೆ ಸೇರಿದ ಹಿರಿಯರಿಂದ ತೆಗೆದುಕೊಳ್ಳುವುದು ರೂಢಿ. ಬಾಲ್ಯದಿಂದಲೂ ಧನಿ ಎಂಬುವ ಅಕ್ಕಸಾಲಿಗ ಹೆಂಗಸು ಇವರನ್ನು ಪ್ರೀತಿಸುತ್ತಿದ್ದಳು. ಅವಳು ಒಂದು ದಿನ ಮಗುವನ್ನು ಉಪನಯನದ ಸಮಯದಲ್ಲಿ ತನ್ನಿಂದ ಭಿಕ್ಷೆಯನ್ನು ತೆಗೆದುಕೊಳ್ಳಬೇಕೆಂದು ಬೇಡಿಕೊಂಡಳು. ಶ್ರೀರಾಮಕೃಷ್ಣರು ಅದಕ್ಕೆ ಒಪ್ಪಿಗೆ ಇತ್ತರು. ಇವರಿಗೆ ಒಂಭತ್ತು ವರುಷದ ಸಮಯಕ್ಕೆ ಉಪನಯನವಾಯಿತು. ಆ ಸಮಯದಲ್ಲಿ ಯಾರು ಎಷ್ಟು ಆಕೆಯಿಂದ ಭಿಕ್ಷೆ ತೆಗೆದುಕೊಳ್ಳದಂತೆ ಹೇಳಿದರೂ ಕೇಳಲಿಲ್ಲ. ಕೊನೆಗೂ ಧನಿಯೆಂಬ ಅಕ್ಕಸಾಲಿಗಳಿಂದ ಮೊದಲ ಭಿಕ್ಷೆವನ್ನು ಸ್ವೀಕರಿಸಿದರು. ಸಾಧಾರಣವಾಗಿ ಆ ವಯಸ್ಸಿನಲ್ಲಿ ದೊಡ್ಡವರು ಹೇಳಿದಂತೆ ಕೇಳುವುದು ಸ್ವಭಾವ. ಅಂತಹ ವಯಸ್ಸಿನಲ್ಲಿಯೇ ಅವರ ಜೀವನದಲ್ಲಿ ಸತ್ಯಕ್ಕಾಗಿ ಏನನ್ನಾದರೂ ಸಹಿಸುವ ಶಕ್ತಿಯನ್ನು ನೋಡುತ್ತೇವೆ.

ರಾಮಕೃಷ್ಣರನ್ನು ಹಳ್ಳಿಯ ಶಾಲೆಗೆ ಹಾಕಿದರು. ಶಾಲೆಯಲ್ಲಿ ಓದುವುದು ಬರೆಯುವುದರಲ್ಲಿ ಸ್ವಲ್ಪ ಆಸಕ್ತಿ ತೋರಿದರೂ ಗಣಿತ ತಲೆಗೆ ಹತ್ತಲಿಲ್ಲ. ಶಾಲೆಯೊಳಗೆ ಕುಳಿತು ಓದುವುದಕ್ಕಿಂತ ಹತ್ತಿರಿದ್ದ ತೆನೇಸಿ

ನಲ್ಲಿ ಆಡುವುದಕ್ಕೆ ಇವರಿಗೆ ಆಸಕ್ತಿ. ಕೆಲವು ವೇಳೆ ಶಾಲಾ ಉಪಾಧ್ಯಾಯರು ಬರುವುದು ತಡವಾದರೆ ಹುಡುಗರೊಂದಿಗೆ ಹತ್ತಿರವಿರುವ ತೋಪಿಗೆ ಹೋಗಿ ಅವರು ನೋಡಿದ್ದ ಬಯಲಾಟವನ್ನು ಆಡುತ್ತಿದ್ದರು. ಅದಕ್ಕೆ ಸಂಬಂಧಪಟ್ಟ ಹಾಡು, ನಟನೆ ಇವುಗಳನ್ನು ಅಭಿನಯಿಸುವುದರಲ್ಲಿ ತುಂಬಾ ಪಾಂಡಿತ್ಯವನ್ನು ತೋರಿದರು. ಪ್ರಚಂಡ ಜ್ಞಾಪಕಶಕ್ತಿ. ಹಾಡನ್ನು ಒಂದು ಸಲ ಕೇಳಿದರೆ ಸಾಕು, ಅದನ್ನು ನೆನಪಿನಲ್ಲಿಡುತ್ತಿದ್ದರು. ಅದರಂತೆ ಅಭಿನಯಿಸುತ್ತಿದ್ದರು.

ಶ್ರೀರಾಮಕೃಷ್ಣರು ಹುಟ್ಟು ಕಲೋಪಾಸಕರು. ಬಾಹ್ಯಪ್ರಪಂಚದ ಮನಸೆಳೆವ ಬಣ್ಣ, ಆಕಾರ, ಭಾವ, ಧ್ವನಿ ಇವುಗಳೆಲ್ಲಾ ಇಂದ್ರಿಯಾತೀತ ಪ್ರಪಂಚದೆಡೆಗೆ ಇವರನ್ನು ಬೀಸಿ ಕರೆಯುತ್ತಿತ್ತು. ಪರಮಹಂಸರಿಗೆ ಆರೇಳು ವರುಷದ ಸಮಯ. ಆಗ ಒಂದು ದಿನ ಹಸುರು ಗದ್ದೆಯ ಬಯಲಿನಲ್ಲಿ ನಡೆಯುತ್ತಿದ್ದರು. ಕೈಯಲ್ಲಿದ್ದ ಒಂದು ಸಣ್ಣ ಬುಟ್ಟಿಯಲ್ಲಿ ಪುರಿಯಿತ್ತು. ಅದನ್ನು ತಿನ್ನುತ್ತಾ ಸುತ್ತಲು ನೋಡುತ್ತಾ ಹೋಗುತ್ತಿದ್ದರು. ಸುತ್ತಲೂ ಹಸರು ಗದ್ದೆ, ಮೇಲೆ ಅಕಸ್ಮಾತ್ ಮೋಡ ಕವಿಯಿತು, ಅದು ಕ್ರಮೇಣ, ವಿಸ್ತಾರವಾಗಿ ಆಕಾಶವನ್ನೆಲ್ಲಾ ವ್ಯಾಪಿಸಿತು. ಆದರ ಕೆಳಗೆ ಬಕಪಕ್ಷಿಯ ಸಾಲು ಹಾರಿಹೋಗುತ್ತಿತ್ತು. ಈ ಬಣ್ಣಗಳ ವೈವಿಧ್ಯತೆಯನ್ನು ನೋಡಿದಾಗ ಅವರ ಮನಸ್ಸಿಗೆ ಯಾವ ಇಂದ್ರಿಯಾತೀತ ಸತ್ಯ ಹೊಳೆಯಿತೊ ತಿಳಿಯದು. ಸಂಪೂರ್ಣವಾಗಿ ತನ್ಮಯರಾಗಿ ಬಾಹ್ಯ ಪ್ರಪಂಚವನ್ನು ಮರೆತುಬಿಟ್ಟರು. ಹತ್ತಿರಿದ್ದವರು ಅವರನ್ನು ಮನೆಗೆ ಕರೆದುಕೊಂಡುಬಂದರು. ಸ್ವಲ್ಪ ಹೊತ್ತಾದ ಮೇಲೆಯೇ ಅವರಿಗೆ ಬಾಹ್ಯ ಪ್ರಜ್ಞೆ ಬಂದುದು. ಆಗ ತಮ್ಮ ಮನಸ್ಸು ಇಂದ್ರಿಯಾತೀತ ಪ್ರಪಂಚದಲ್ಲಿ ಅವರ್ಣನೀಯ ಆನಂದದಲ್ಲಿ ತಲ್ಲೀನವಾಗಿತ್ತು ಎಂದರು.

ಒಂದು ದಿನ ಶಿವರಾತ್ರಿ. ಅಂದು ಜಾಗರಣೆ ಮಾಡಿ ಶಿವಪೂಜೆ ಮಾಡಬೇಕೆಂದು ಅಣಿಯಾಗುತ್ತಿದ್ದರು. ಅಂದು ಊರಿನವರೆಲ್ಲರ ಜಾಗರಣೆಗೆಂದು ಬಯಲು ನಾಟಕ ಒಂದನ್ನು ಆಡಲು ಕೆಲವರು ಅಣಿಯಾಗುತ್ತಿದ್ದರು. ರಾತ್ರಿಯಾಯಿತು. ನಾಟಕ ಆರಂಭವಾಗುವ ಸಮಯ ಬಂದರೂ ಶಿವಪಾತ್ರಧಾರಿ ಬರಲಿಲ್ಲ. ವಿಚಾರಿಸುವಲ್ಲಿ ಅವನಿಗೆ ಅನಾರೋಗ್ಯವೆಂದು ತಿಳಿದುಬಂದಿತು. ಆಗ ಸ್ನೇಹಿತರು ಬಂದು ಶ್ರೀರಾಮಕೃಷ್ಣರನ್ನು ಶಿವಪಾತ್ರವನ್ನು ವಹಿಸಿಕೊಳ್ಳಬೇಕೆಂದು ಕೇಳಿಕೊಂಡರು. ಮೊದಲು ಒಪ್ಪಲಿಲ್ಲ. ಪೂಜೆ ಜಾಗರಣೆಯಲ್ಲಿ ಮನೆಯಲ್ಲಿ ಕಾಲಕಳೆಯ

ಬೇಕೆಂದಿರುವೆ ಎಂದರು. ಬಂದವರು, ಪಾತ್ರಮಾಡಿದರೂ ಶಿವನನ್ನು ಕುರಿತು ಚಿಂತಿಸುತ್ತಲೇ ಇರಬೇಕಾಗುವುದು; ಅದರಿಂದ ನೀನು ಶಿವನ ಧ್ಯಾನವನ್ನು ಮಾಡಿದಂತೆಯೆ, ಎಂದು ಸಮಾಧಾನಮಾಡಿದಮೇಲೆ ಒಪ್ಪಿಕೊಂಡರು. ಶಿವನಂತೆ ಭಸ್ಮ ಬಳಿದುಕೊಂಡು ಜಟಾಧಾರಿಯಾಗಿ ರಂಗಭೂಮಿಯ ಮೇಲೆ ಬಂದು ನಿಂತರು. ರಾಮಕೃಷ್ಣರು ತಾವು ಪಾತ್ರ ಮಾಡುತ್ತಿರುವೆನು ಎಂಬುದನ್ನು ಮರೆತು ಶಿವಧ್ಯಾನದಲ್ಲಿ ತಲ್ಲೀನರಾದರು. ಕಣ್ಣಿನಿಂದ ಆನಂದಬಾಷ್ಪ ಸುರಿಯತೊಡಗಿತು. ಬಾಹ್ಯಪ್ರಪಂಚದ ಅರಿವನ್ನು ಮರೆತರು. ನೆರೆದ ಪ್ರೇಕ್ಷಕ ವೃಂದಕ್ಕೆ ಶಿವನ ಪಾತ್ರಧಾರಿ ಕಾಣಲಿಲ್ಲ. ಶಿವನಲ್ಲಿ ಐಕ್ಯನಾದ ಗಾಢ ಶಿವಭಕ್ತನು ಕಂಡನು. ಪಾತ್ರ ಮಾಡಲು ಇವರಿಂದ ಸಾಗಲಿಲ್ಲ. ಹತ್ತಿರಿದ್ದವರು ಹಾಗೆಯೇ ಇವರನ್ನು ಮನೆಗೆ ಕರೆದುಕೊಂಡು ಹೋದರು. ಮಾರನೇ ದಿನವೇ ಇವರಿಗೆ ಜನರ ಅರಿವುಂಟಾಗಿದ್ದು.

ಮತ್ತೊಂದು ದಿನ ಮೂರು ಮೈಲಿಗಳ ದೂರದಲ್ಲಿದ್ದ ವಿಶಾಲಾಕ್ಷಿಯ ದೇವಸ್ಥಾನಕ್ಕೆ ಕೆಲವು ಹೆಂಗಸರೊಂದಿಗೆ ಹೋಗುತ್ತಿದ್ದರು. ನಡೆದುಕೊಂಡು ಹೋಗುತ್ತಿರುವಾಗ ದೇವಿಗೆ ಸಂಬಂಧಪಟ್ಟ ಹಲವು ಹಾಡನ್ನು ಹೇಳುತ್ತಿದ್ದರು. ತಕ್ಷಣವೇ ಶ್ರೀರಾಮಕೃಷ್ಣರು ಸ್ಥಿರವಾಗಿ ನಿಂತರು. ಕಣ್ಣಿನಲ್ಲಿ ಅಶ್ರುಧಾರೆ ಹರಿಯತೊಡಗಿತು. ಪ್ರಪಂಚದ ಅರಿವೇ ಇವರಿಗೆ ಇರಲಿಲ್ಲ. ಹತ್ತಿರಿದ್ದ ಹೆಂಗಸರು ಎಷ್ಟು ಶೈತ್ಯೋಪಚಾರ ಮಾಡಿದರೂ ಇವರಿಗೆ ಪ್ರಜ್ಞೆ ಬರಲಿಲ್ಲ. ಕೆಲವರು ದೇವರ ಹೆಸರನ್ನು ಇವರ ಕಿವಿಯಲ್ಲಿ ಹೇಳಿದಾಗ ಬಾಹ್ಯ ಪ್ರಪಂಚದ ಅರಿವಾಯಿತು.

ಹಲವು ದೇವದೇವಿಯರ ವಿಗ್ರಹವನ್ನು ತಾವೆ ಮಾಡಿ ಪೂಜಿಸುತ್ತಿದ್ದರು.

ಶ್ರೀರಾಮಕೃಷ್ಣರ ಏಳನೇ ವಯಸ್ಸಿನಲ್ಲಿ ಇವರ ತಂದೆ ಕಾಲವಾದರು. ಮಗು ಮೊದಲ ಬಾರಿ ತನ್ನ ಹತ್ತಿರದವರ ಸಾವನ್ನು ನೋಡಬೇಕಾಯಿತು. ಮೊದಲೆ ಅಂತರ್ಮುಖಿಗಳ ಸ್ವಭಾವ. ಈ ದಾರುಣ ಪೆಟ್ಟು ತಾಕಿದಾಗ ಜಗ ನಶ್ವರವೆಂಬ ಭಾವನೆ ಚಿರಮುದ್ರಿತವಾಯಿತು. ಇವರ ತಾಯಿಗೆ ಪತಿ ಅಗಲಿಕೆ ದಾರುಣ ವ್ಯಥೆಯನ್ನುಂಟು ಮಾಡಿತು. ಮಗು ಇದನ್ನೂ ಕಣ್ಣಾರೆ ನೋಡಬೇಕಾಯಿತು. ಸಾಧ್ಯವಾದ ಮಟ್ಟಿಗೆ ಯಾವಾಗಲೂ ತಾಯಿಯ ಹತ್ತಿರವಿರುತ್ತ ಕೈಲಾದ ಮಟ್ಟಿಗೆ ಅವರಿಗೆ ಸಂತೋಷವನ್ನುಂಟುಮಾಡಲು ಯತ್ನಿಸಿದರು.

ಕಲ್ಕತ್ತೆಯಿಂದ ಪೂರಿಗೆ ಹೋಗುವ ದಾರಿಯಲ್ಲಿ ಕಾಮಾ
ಪುಕುರವಿತ್ತು. ಅನೇಕ ಯಾತ್ರಿಕರು ಅಲ್ಲಿ ತಂಗಿ ಹೋಗುತ್ತಿದ್ದರು
ಶ್ರೀ ರಾಮಕೃಷ್ಣರ ಮನೆ ಹತ್ತಿರವೇ ಅನೇಕ ಸಾಧುಸಂತರು ಇಳಿದು
ಕೊಳ್ಳುತ್ತಿದ್ದ ಛತ್ರವಿತ್ತು. ಶ್ರೀರಾಮಕೃಷ್ಣರು ಅಲ್ಲಿಗೆ ಪದೇ ಪದೇ
ಹೋಗುತ್ತಿದ್ದರು. ಸಾಧುಗಳೊಂದಿಗೆ ಮಾತನಾಡುವುದು, ಅವರು
ಹೇಳುವುದನ್ನು ಭಕ್ತಿಯಿಂದ ಕೇಳುವುದು, ಅವರಿಗೆ ಸಣ್ಣ ಪುಟ್ಟ ಕೆಲಸದ
ನೆರವಾಗುವುದು, ಹೀಗೆ ಮಾಡುತ್ತಿದ್ದರು. ಒಂದು ದಿನ ಇವರಂತೆಯೆ
ತಾನೂ ಸಾಧುವಾಗಬೇಕೆಂದು ಬಯಸಿ ಮೈಗೆ ಬೂದಿ ಬಳಿದುಕೊಂಡು
ಬಟ್ಟೆಯನ್ನು ಬೈರಾಗಿಯಂತೆ ಉಟ್ಟುಕೊಂಡು ಮನೆಗೆ ಬಂದು ತಾಂ
ಎದುರಿಗೆ ತಾನು ಸಾಧುವಾಗಿಬಿಟ್ಟೆ ಎಂದರು. ಇದನ್ನು ನೋಡಿ
ತಾಯಿಗೆ ವ್ಯಥೆಯಾಯಿತು. ಗಂಡನ ಅಗಲಿಕೆಯನ್ನು ಶ್ರೀರಾಮ
ಕೃಷ್ಣರನ್ನು ನೋಡಿ ಮರೆತಿದ್ದರು. ಈಗ ಈ ಮಗುವೆ ಹೀಗೆ ಆಗುವ
ನೆಂದು ಹೇಳಿದಾಗ ಎದೆ ತಲ್ಲಣಿಸಿತು. ಶ್ರೀರಾಮಕೃಷ್ಣರು ತಾಯಿ
ದುಃಖಿತಳಾದುದನ್ನು ನೋಡಿ ತಮ್ಮ ಬೈರಾಗಿ ವೇಷವನ್ನು ತೆಗೆದು
ಹಾಕಿದರು.

ಶ್ರೀರಾಮಕೃಷ್ಣರ ಮನೆ ಸಮೀಪದಲ್ಲಿ ಸೀತಾನಾಥಪೈನಿ ಎಂ
ಗೃಹಸ್ಥ ಭಕ್ತನಿದ್ದನು. ಆತನ ಮನೆಯಲ್ಲಿ ಹಲವಾರು ಹೆಣ್ಣು ಮಕ್ಕಳ
ಇದ್ದರು. ರಾಮಕೃಷ್ಣರು ಅವರ ಮನೆಗೆ ಹೋಗಿ ಅನೇಕ ವೇಳೆ ಹಾಡು
ಕಥೆ ಮುಂತಾದುವನ್ನು ಹೇಳಿ ಸಂತೋಷಪಡಿಸುತ್ತಿದ್ದರು. ಆ ಮನೆ
ಯವರು ಈ ಮಗುವಿನ ಹಾಡು ಮತ್ತು ನಟನೆಗೆ ಮೆಚ್ಚಿ ಕೃಷ್ಣನ
ವೇಷಕ್ಕೆ ಬೇಕಾಗುವ ಬಟ್ಟೆಬರೆಯನ್ನು ಹೊಲಿಸಿ ಒಂದು ಚಿನ್ನದ ಕೊ
ಲನ್ನು ಇವರಿಗೆ ಕೊಟ್ಟರಂತೆ.

ಇವರ ಮನೆ ಪಕ್ಕದಲ್ಲೆ ದುರ್ಗಾದಾಸಪೈನಿ ಎಂಬ ಮತ್ತೊಬ್ಬ
ನಿದ್ದನು. ಅವರ ಮನೆಯವರು ಇನ್ನೂ ಘೋಷಾ ಪದ್ಧತಿಯನ್ನು
ಬಿಟ್ಟಿರಲಿಲ್ಲ. ಆತನು ಇದಕ್ಕೆ ಹೆಮ್ಮೆ ಪಡುತ್ತಿದ್ದನು. ತನ್ನ ಮನೆ
ಹೆಂಗಸರನ್ನು ಪರಪುರುಷರಾರೂ ನೋಡಿಲ್ಲ; ಅವರು ನೋಡುವುದಕ್ಕೆ
ಆಗುವುದಿಲ್ಲ ಎಂದನು. ರಾಮಕೃಷ್ಣರು ಇದನ್ನು ಕೇಳಿ "ಮುಸುಕು
ಹೆಂಗಸರ ಮಾನ ಕಾಪಾಡುವುದು. ಸಂಸ್ಕೃತಿ ಮತ್ತು ಒಳ್ಳೆ ನಡತೆ
ಬೇಕಾದರೆ ನಾನು ನಿಮ್ಮ ಮನೆಗೆ ಪ್ರವೇಶಿಸಬಲ್ಲೆ" ಎಂದರು. ಇದನ್ನು
ಕೇಳಿ ದುರ್ಗಾದಾಸನು "ನೋಡೋಣ ಹೇಗೆ ಮಾಡುವೆಯೊ" ಎಂದನು.

ಒಂದು ದಿನ ಸಂಜೆ ದುರ್ಗಾದಾಸನು ಕೆಲವರೊಂದಿಗೆ ಮಾತನಾಡುತ್ತ ಮನೆಯ ಜಗಲಿಯ ಮೇಲೆ ಕುಳಿತುಕೊಂಡಿದ್ದನು. ಒಬ್ಬ ಹುಡುಗಿ ಮುಸುಕಿನಲ್ಲಿ ಬಂದು, "ತಾನು ಹತ್ತಿರದ ಹಳ್ಳಿಯವಳು, ನೂಲನ್ನು ಮಾರುವುದಕ್ಕೆ ಬಂದೆ; ಸಂಜೆಯಾಯಿತು ದೂರ ನಡೆದು ಹೋಗಬೇಕು; ರಾತ್ರಿ ಇಲ್ಲಿ ತಂಗಿ ಹೋಗುವುದಕ್ಕೆ ಅವಕಾಶವಿದೆಯೆ?" ಎಂದು ಕೇಳಿದಳು. ದುರ್ಗಾದಾಸನು ಒಳಗೆ ಹೋಗಿ ಹೆಂಗಸರೊಡನೆ ಮಾತನಾಡು ಎಂದು ಕಳುಹಿಸಿದನು. ಹುಡುಗಿ ಒಳಗೆ ಹೋದ ಮೇಲೆ ದುರ್ಗಾದಾಸನ ಹೆಣ್ಣು ಮಕ್ಕಳು ಅಪರಿಚಿತ ಹುಡುಗಿಯನ್ನು ಆದರದಿಂದ ಬರಮಾಡಿಕೊಂಡು ತಿನ್ನುವುದಕ್ಕೆ ತಿಂಡಿಕೊಟ್ಟರು. ಅವರೊಡನೆ ಬಹಳ ಹೊತ್ತು ರಾತ್ರಿ ಮಾತನಾಡುತ್ತಿದ್ದರು. ಬೀದಿಯ ಹೊರಗಡೆ ಯಾರೋ ರಾಮಕೃಷ್ಣ ಎಂದು ಕೂಗುವಂತೆ ತೋರಿತು. ಈ ಸದ್ದು ಹುಡುಗಿಯ ಕಿವಿಗೆ ಬಿದ್ದೊಡನೆಯೇ "ಅಣ್ಣ ಬರುತ್ತೇನಿ" ಎಂದು ಕೂಗಿಕೊಂಡಳು. ಆಗ ಮನೆಯವರಿಗೆ ಗೊತ್ತಾಯಿತು. ಈ ಹುಡುಗಿ ರಾಮಕೃಷ್ಣನೇ ಎಂದು ಎಲ್ಲರಿಗೂ ಆಶ್ಚರ್ಯವಾಯಿತು. ದುರ್ಗಾದಾಸನಿಗೆ ಮೊದಲು ಕೋಪ ಬಂದರೂ ಮರೆತು ಈ ಹಾಸ್ಯದಲ್ಲಿ ಎಲ್ಲರೊಡನೆ ತಾನೂ ಭಾಗಿಯಾದನು.

ತಂದೆಯ ಕಾಲಾನಂತರ ಮನೆಯ ಜವಾಬ್ದಾರಿ ಶ್ರೀರಾಮಕೃಷ್ಣರ ಹಿರಿಯ ಅಣ್ಣ ರಾಮಕುಮಾರನ ಮೇಲೆ ಬಿದ್ದಿತು. ವಿಸ್ತಾರವಾಗುತ್ತಿರುವ ಸಂಸಾರ ನಿರ್ವಹಣೆ ಹಳ್ಳಿಯಲ್ಲಿ ಬಹಳ ಕಷ್ಟವಾಯಿತು. ಈತನೇನೋ ದೊಡ್ಡ ವಿದ್ಯಾವಂತನಾಗಿದ್ದನು. ಆದರೆ ಆ ಹಳ್ಳಿಯಲ್ಲಿ ವಿದ್ಯೆಗೆ ಗೌರವ ಸಿಕ್ಕೀತೆ ಹೊರತು ಹಣ ಸಿಕ್ಕುವಂತೆ ಇರಲಿಲ್ಲ. ಕಲ್ಕತ್ತೆಗೆ ಹೋಗಿ ಅಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ತೆರೆದನು. ಶ್ರೀರಾಮಕೃಷ್ಣರು ಆಗ ಕಾಮಾರಪುಕುರದಲ್ಲೇ ಇದ್ದರು. ಆಗ ಅವರಿಗೆ ಸುಮಾರು ಹದಿನಾರು ವಯಸ್ಸು. ಹಳ್ಳಿಯಲ್ಲಿದ್ದರೆ ಹುಡುಗ ಓದುವುದಿಲ್ಲವೆಂದು ಕೆಲವು ದಿನಗಳಾದ ಮೇಲೆ ರಾಮಕುಮಾರನು ತನ್ನ ತಮ್ಮನನ್ನು ಕಲ್ಕತ್ತೆಗೆ ಕರೆಸಿಕೊಂಡನು. ತಾಯಿಯನ್ನು ಮೊದಲಬಾರಿ ಬಿಟ್ಟು ಬಂದನು. ಕೆಲವುದಿನ ಹುಡುಗನನ್ನು ಹೋದ ದಾರಿಗೆ ಬಿಟ್ಟನು. ಹುಡುಗನಿಗೆ ಓದಿನ ಕಡೆ ಮನಸ್ಸು ಓಡುತ್ತಿರಲಿಲ್ಲ. ಒಂದು ದಿನ ತಮ್ಮನನ್ನು ಕರೆದು ನೀನು ಹೀಗೆ ಆದರೆ ಹೇಗೆ? ನಿನ್ನ ಭವಿಷ್ಯವೇನು? ಎಂದು ಕೇಳಿದನು. ಶ್ರೀರಾಮಕೃಷ್ಣರು "ನನಗೆ ಬಟ್ಟೆ, ಹಿಟ್ಟು ಕೊಡುವ ವಿದ್ಯೆ ಬೇಡ. ಯಾವುದು ನನ್ನ ಹೃದಯಕ್ಕೆ ಬೆಳಕನ್ನು ಕೊಡಬಲ್ಲದೋ, ಯಾವುದನ್ನು

ತಿಳಿದರೆ ಮನುಷ್ಯ ನಿತ್ಯ ತೃಪ್ತನಾಗುತ್ತಾನೆಯೋ, ಆ ವಿದ್ಯೆಯನ್ನು ಕ
ಯಲು ನಾನು ಯತ್ನಿಸುವೆನು" ಎಂದರು. ಅಣ್ಣ ಅಪ್ರತಿಭನಾದನ
ತಮ್ಮ ಸುಲಭವಾಗಿ ದಾರಿಗೆ ಬರುವಂತೆ ಕಾಣಲಿಲ್ಲ. ತಾನು ಹೋ
ತ್ತಿದ್ದ ಕೆಲವು ಮನೆಗೆ ಪೂಜೆಗಾದರೂ ಹೋಗು ಎಂದು ಹೇಳಿದನ
ಇದಕ್ಕೆ ಬಹಳ ಸಂತೋಷದಿಂದ ಒಪ್ಪಿಕೊಂಡರು.

ಶ್ರೀರಾಮಕೃಷ್ಣರು ಇತರರ ಮನೆಗೆ ಹೋಗಿ ಪೂಜೆ ಮಾಡುವ
ಮನೆಯವರಿಗೆ ಹೊಸ ಪೂಜಾರಿಯು ಪೂಜೆಮಾಡುವ ರೀತಿ, ಅವರ ಭಾ
ಮುಂತಾದುವನ್ನು ನೋಡಿ ಹೆಚ್ಚು ಗೌರವ ಉಂಟಾಯಿತು. ಅವ
ವಿಲ್ಲದೆ ಶ್ರದ್ಧಾಭಕ್ತಿಯಿಂದ ಪೂಜೆ ಮಾಡುತ್ತಿದ್ದರು. ಭಕ್ತಿಯಿ
ದೇವಿಗೆ ಹಾಡು ಹೇಳುತ್ತಿದ್ದರು. ಮನೆಯವರಿಗೂ ಇವರನ್ನು ಕಂ
ಪ್ರೀತಿಯುಂಟಾಯಿತು. ಕೊಡುವ ದಕ್ಷಿಣೆ ದಾನದ ಆಸೆಗಲ್ಲದೆ ಕೇ
ಉಪಾಸನೆಗಾಗಿ ದೇವರನ್ನು ಇವರು ಪೂಜಿಸುತ್ತಿದ್ದರು.

ಕಲ್ಕತ್ತೆಯಲ್ಲಿ ರಾಣಿ ರಾಸಮಣಿ ಎಂಬ ದೊಡ್ಡ ದೈವಭಕ್ತಳಿದ್ದ
ಆಕೆ ತುಂಬಾ ಶ್ರೀಮಂತೆ. ಬೆಸ್ತರ ಕುಲದಿಂದ ಬಂದವಳು. ಬೇಕಾದ
ದುಡ್ಡು ಖರ್ಚುಮಾಡಿ ದಕ್ಷಿಣೇಶ್ವರ ಎಂಬಲ್ಲಿ ಗಂಗಾನದಿಯ ತೀರದ
ದೊಡ್ಡದೊಂದು ಕಾಳಿಕಾ ದೇವಾಲಯವನ್ನು ಕಟ್ಟಿಸಿದಳು. ಅದ
ಪ್ರತಿಷ್ಠೆಮಾಡುವ ದಿನ ಬಂದಿತು. ಆದರೆ ಅಲ್ಲಿ ಪೂಜೆಮಾಡಲು ಯ
ಪೂಜಾರಿಯೂ ಬರಲಿಲ್ಲ. ರಾಣಿ ಖಿನ್ನಳಾದಳು. ಈ ಸಮಾಚ
ರಾಮಕುಮಾರನಿಗೆ ಗೊತ್ತಾಯಿತು. ಆತ ಈಕೆಗೆ ಒಂದು ಉಪಾ
ವನ್ನು ಸೂಚಿಸಿದನು. ಆ ದೇವಸ್ಥಾನವನ್ನು ಅದಕ್ಕೆ ಪ್ರತಿವರ್ಷ
ತಗಲುವ ಖರ್ಚಿನ ಸಮೇತ ಒಬ್ಬ ಬ್ರಾಹ್ಮಣನಿಗೆ ದಾನ ಮಾಡಿಬಿ
ಆ ದೇವಸ್ಥಾನದಲ್ಲಿ ಯಾವ ಬ್ರಾಹ್ಮಣ ಪೂಜಾರಿ ಬೇಕಾದರೂ ಪ
ಮಾಡಬಹುದು ಎಂದನು. ಹಾಗೆ ಮಾಡಿದರೂ ಯಾರೂ ಮುಂದ
ಬರಲಿಲ್ಲ. ಕೊನೆಗೆ ಉಪಾಯ ಹೇಳಿ ಕೊಟ್ಟವನೇ ಮುಂದೆ ಬರಬೇ
ಯಿತು. ರಾಮಕುಮಾರನೆ ಅಲ್ಲಿ ಪೂಜೆ ಮಾಡುವುದಕ್ಕೆ ಒಪ್ಪಿಕೊಂಡ
ಜೊತೆಗೆ ರಾಮಕೃಷ್ಣರೂ ಬಂದರು. ಕೆಲವು ವೇಳೆ ತಮ್ಮ ಅಣ
ಪೂಜೆಗೆ ಅಣಿಮಾಡಿಕೊಡುತ್ತಿದ್ದರು.

ರಾಣಿ ರಾಸಮಣಿ ಹಿರಿಯ ಅಳಿಯ ಮಥುರನಾಥ ಬಿಸ್ವಾ
ಎಂಬುವನಿದ್ದನು. ವಿದ್ಯಾವಂತ, ಮೇಲ್ವಿಚಾರಣೆ ನೋಡಿಕೊಳ್ಳುವುದ
ತುಂಬಾ ನಿಪುಣ. ರಾಣಿಯ ಆಸ್ತಿಯನ್ನೆಲ್ಲ ಅವನೇ ನೋಡಿಕೊ

ತ್ತಿದ್ದನು. ಹಲವುವೇಳೆ ಆತ ಗುಡಿಗೆ ಬಂದಾಗ ರಾಮಕೃಷ್ಣರು ಕಣ್ಣಿಗೆ ಬೀಳುತ್ತಿದ್ದರು. ಆ ಹುಡುಗನ ಮೇಲೆ ಪ್ರೀತಿ ನೋಡಿದೊಡನೆಯೆ ಮಥುರನಾಥನಲ್ಲಿ ಹುಟ್ಟಿತು. ಹೇಗಾದರೂ ಮಾಡಿ ಆ ಹುಡುಗನನ್ನು ಗುಡಿಯಲ್ಲೇ ನಿಲ್ಲಿಸಬೇಕು; ಆತ ಪೂಜಾರಿಯಾದರೆ ಒಳ್ಳೆಯದಾದೀತು ಎಂದು ಭಾವಿಸಿ ವಿಚಾರಿಸಿದನು. ಆದರೆ ರಾಮಕೃಷ್ಣರು ಅದಕ್ಕೆ ಒಪ್ಪಲಿಲ್ಲ.

ಕೆಲವು ಕಾಲವಾದ ಮೇಲೆ ರಾಮಕುಮಾರನು ತನ್ನ ಹಳ್ಳಿಗೆ ಹೋದನು. ಪುನಃ ಹಿಂತಿರುಗಿ ಬಂದು ದೇವಿಯ ಪೂಜೆಯನ್ನು ಮಾಡುವ ಸುಯೋಗ ಅವನಿಗೆ ಇರಲಿಲ್ಲ. ಅಲ್ಲಿಯೇ ಕಾಲವಾದನು. ಆ ಸಮಯಕ್ಕೆ ಸರಿಯಾಗಿ ಹೃದಯರಾಮನೆಂಬ ರಾಮಕೃಷ್ಣರ ನೆಂಟನೊಬ್ಬನು ದಕ್ಷಿಣೇಶ್ವರಕ್ಕೆ ಜೀವನೋಪಾಯಕ್ಕೆ ಬಂದನು. ವಯಸ್ಸಿನಲ್ಲಿ ಶ್ರೀರಾಮಕೃಷ್ಣರಿಗಿಂತ ಕೆಲವು ವರುಷ ಕಿರಿಯವನು. ಆತನು ಶ್ರೀರಾಮಕೃಷ್ಣರನ್ನು ಕೇಳಿಕೊಂಡನು. ಶ್ರೀರಾಮಕೃಷ್ಣರು, ದೇವಿಗೆ ಬೇಕಾದಷ್ಟು ಒಡವೆ ವಸ್ತ್ರಗಳನ್ನೆಲ್ಲ ಹಾಕಿರುವರು; ಅದು ಹೋದರೆ ಪೂಜಾರಿ ತಲೆಯಮೇಲೆ ಬರುವುದು. ತುಂಬಾ ಜವಾಬ್ದಾರಿ ಕೆಲಸ ಬೇಡ, ಎಂದರು. ಹೃದಯನು ತಾನು ಆ ಜವಾಬ್ದಾರಿ ಕೆಲಸವನ್ನು ನೋಡಿಕೊಳ್ಳುತ್ತೇನೆ. ರಾಮಕೃಷ್ಣರು ಪೂಜೆ ಮಾಡಿದರೆ ಸಾಕು, ಎಂದನು. ಶ್ರೀರಾಮಕೃಷ್ಣರು ಪೂಜೆ ಮಾಡುವುದಕ್ಕೆ ಒಪ್ಪಿಕೊಂಡರು.

ಶ್ರೀರಾಮಕೃಷ್ಣರ ಜೀವನದಲ್ಲಿ ಮಥುರನಾಥನು ಅತಿ ಮುಖ್ಯವಾದ ಪಾತ್ರವನ್ನು ಪಡೆದನು. ಶ್ರೀರಾಮಕೃಷ್ಣರಿಗೆ ಸಾಧನೆ ಸಮಯದಲ್ಲಿ ಬೇಕಾಗುವ ಸೌಕರ್ಯಗಳನ್ನೆಲ್ಲಾ ಒದಗಿಸಿದನು. ಅತಿ ಪ್ರೀತಿಯಿಂದ ರಾಮಕೃಷ್ಣರನ್ನು ಕಾಣುತ್ತಿದ್ದನು. ತನ್ನ ಇಷ್ಟ ದೈವವೇ ಶ್ರೀರಾಮಕೃಷ್ಣರಂತೆ ಇದೆ ಎಂದು ಭಾವಿಸಿದನು.

ದಕ್ಷಿಣೇಶ್ವರ ಸನ್ನಿವೇಶ ಶ್ರೀರಾಮಕೃಷ್ಣರ ಜೀವನಕ್ಕೆ ಅತಿ ಮುಖ್ಯವಾದ ಹಿನ್ನೆಲೆಯಾಯಿತು. ಪೂಜೆ ಮಾಡುವುದಕ್ಕೆ ಪ್ರಾರಂಭಿಸಿದುದು ಇಲ್ಲಿ. ಅದ್ಭುತ ಸಾಧನೆ ಮಾಡಿದುದು ಇಲ್ಲಿ. ಮಹಾ ವ್ಯಕ್ತಿಗಳು ಇವರನ್ನು ಸಂದರ್ಶಿಸಲು ಇಲ್ಲಿಗೇ ಬಂದರು. ಸ್ವಾಮಿ ವಿವೇಕಾನಂದರಂತಹ ಶಿಷ್ಯರನ್ನು ತರಪೇತು ಮಾಡಿದುದು ಇಲ್ಲಿ. ಶ್ರೀರಾಮಕೃಷ್ಣರ ಲೀಲಾ ನಾಟಕಕ್ಕೆ ದಕ್ಷಿಣೇಶ್ವರ ಒಂದು ರಂಗಭೂಮಿಯಾಯಿತು. ಪಾವನ ಗಂಗಾನದಿ ಮುಂದೆ ಹರಿಯುತ್ತಿದೆ. ನದಿಯಿಂದ ಬಂದೊಡನೆಯೆ ದೊಡ್ಡ ಸೋಪಾನ ಪಂಕ್ತಿ. ನಂತರ ಎಡಗಡೆ ಬಲಗಡೆ ಆರು ಆರು

ಶಿವಮಂದಿರಗಳು ಅದನ್ನು ದಾಟಿ ಹೋದರೆ ಭವ್ಯವಾದ ಕಾಳಿ
ದೇವಸ್ಥಾನ, ಅದರ ಮುಂದುಗಡೆ ವಿಶಾಲವಾದ ನಾಟ್ಯಮಂದಿ
ಮತ್ತೊಂದು ಕಡೆ ರಾಧಾಕೃಷ್ಣರ ದೇವಸ್ಥಾನ. ಸುತ್ತಲೂ ವಿಸ್ತಾ
ವಾದ ಅಂಗಳ, ಅದರ ಹಿಂದೆ ಪ್ರಾಕಾರದ ಸುತ್ತಲೂ ಯಾತ್ರಿಕ
ಬಂದರೆ ತಂಗಿಹೋಗುವುದಕ್ಕೆ ಹಲವಾರು ಕೋಣೆಗಳು ಇವೆ. ಪ್ರಾಕಾ
ವನ್ನು ದಾಟಿದೊಡನೆ ಗಂಗಾನದಿಯ ತೀರದಲ್ಲಿ ಅತಿ ದಟ್ಟವಾದ ಕಾಡ
ನಿರ್ಜನ ಪ್ರದೇಶ. ಆಧ್ಯಾತ್ಮಿಕ ಸಾಧನೆಯನ್ನು ಮಾಡುವುದಕ್ಕೆ ಯೋ
ವಾದ ಸ್ಥಳ. ಪರಮಹಂಸರು ಈ ಪಾವನ ಪ್ರದೇಶವನ್ನು ತಮ್ಮ ತಪ
ನಿಂದ ಪಾವನತರ ಮಾಡಿದರು.

ಶ್ರೀರಾಮಕೃಷ್ಣರು ಪೂಜಾ ಕಾರ್ಯಕ್ಕೆ ಆರಂಭಿಸಿದರು. ಬೆಳಿ
ಭಕ್ತಿಯಿಂದ ಕಂಪಿಸುತ್ತ ಹೋಗುವರು. ದೇವಿಗೆ ಅಲಂಕಾರ ಮಾಡ
ವರು. ಪೂಜೆ ಮಾಡುವರು. ನೈವೇದ್ಯ ಮಾಡುವರು. ಆದರೆ ಇದರಲ್ಲಿ
ಶ್ರೀರಾಮಕೃಷ್ಣರ ಜೀವನ ಕೊನೆಗೊಂಡಿದ್ದರೆ ಒಬ್ಬ ಪೂಜಾರಿ ಮಾತ್ರ
ಸಿಕ್ಕುತ್ತಿದ್ದನು. ಜಗದ್ವಂದ್ಯ ಶ್ರೀರಾಮಕೃಷ್ಣರು ಸಿಕ್ಕುತ್ತಿರಲಿಲ್ಲ
ಶಿಲಾಮೂರ್ತಿಯಲ್ಲಿ ಚೇ ತ ನ ವಿ ದೆ ಯೆ ? ಆಕೆ ಶಿಲ್ಪಿಗಳು ಕೊರೆ
ವಿಗ್ರಹವೊ ಅಥವಾ ಭಕ್ತರು ಕಂಡದರ್ಶನವೋ? ಆಕೆ ಕೇವಲ ಒಂದ
ಕಲ್ಪನೆಯ ಕಂತೆಯೋ ಅಥವಾ ಭಕ್ತರ ಮೊರೆಯನ್ನು ಕೇಳಿ ಅವರನ್ನು
ಸದಾ ಉದ್ಧಾರಮಾಡಲು ಕಾದು ಕುಳಿತಿರುವ ಮಹಾ ಶಕ್ತಿ ಚಿಲುಮೆಯೊ
ಇದರ ಸತ್ಯವನ್ನು ಪರೀಕ್ಷಿಸುವುದಕ್ಕಾಗಿ ತಮ್ಮ ಜೀವನವನ್ನೆ ಒರೆಗಲ್ಲಾ
ಮಾಡಿದರು.

ಎಲ್ಲ ಜನರಿಂದ ದೂರವಾದರು. ಅವರದೇ ಪ್ರಪಂಚದಲ್ಲಿ ವಿಹರಿ
ತೊಡಗಿದರು. ಜಗನ್ಮಾತೆಯನ್ನು ನೋಡಬೇಕೆಂಬ ಕಾಡುಗಿಚ್ಚೊಂದ
ಅವರ ಜೀವನವನ್ನೆಲ್ಲ ವ್ಯಾಪಿಸಿತು. ಹಗಲು ಪೂಜೆ ಮಾಡುವರು
ಕಂಬನಿದುಂಬಿ ಜಗನ್ಮಾತೆಗಾಗಿ ಅಳುವರು. “ಹೇ ಜಗನ್ಮಾತೆ! ನೀನ
ಎಲ್ಲಿರುವೆ, ಮೈದೋರು. ರಾಮಪ್ರಸಾದ ನಿನ್ನ ದರ್ಶನ ಪಡೆದು ಅನುಗ್ರ
ಹೀತನಾದ. ನಾನೇನು ಪಾಪಿಯೆ! ನನ್ನ ಬಳಿಗೆ ನೀನೇಕೆ ಬಾರೆ? ನನ
ಸುಖ ಬೇಡ, ಐಶ್ವರ್ಯ ಬೇಡ, ಸ್ನೇಹಿತರು ಬೇಡ, ಯಾವ ಪ್ರಪಂಚ
ಭೋಗವೂ ಬೇಡ. ಹೇ ತಾಯಿ ನಿನ್ನನ್ನು ನೋಡಬೇಕಾದುದೊಂದೇ ನನ್ನ
ಚರಮಗುರಿ” ಎಂದು ಅಳುವರು. ದಿನದ ಅಂತ್ಯ ಸಮಯವನ್ನು
ಸೂಚಿಸುವ ಘಂಟಾ ಧ್ವನಿಯನ್ನು ಕೇಳಿದೊಡನೆಯೆ ಹೃದಯವೇಗದಿಂ

ಅಳತೊಡಗುವರು: "ತಾಯಿ ಮತ್ತೊಂದುದಿನ ವ್ಯರ್ಥವಾಯಿತು. ನಾನು ಇನ್ನೂ ನಿನ್ನನ್ನು ಸಂದರ್ಶಿಸಲಿಲ್ಲ. ಈ ಅಲ್ಪಜೀವನದಲ್ಲಿ ಆಗಲೇ ಒಂದು ದಿನ ಕಳೆಯಿತು. ನನಗೆ ಇನ್ನೂ ಸತ್ಯ ಸಾಕ್ಷಾತ್ಕಾರವಾಗಲಿಲ್ಲ."

ಬೇಕಾದಷ್ಟು ಅತ್ತರು, ಪ್ರಾರ್ಥಿಸಿದರು, ಧ್ಯಾನ ಮಾಡಿದರು. ಆದರೂ ದೇವಿ ಮೈದೋರಲಿಲ್ಲ. ಒಂದು ದಿನ ಗರ್ಭಗುಡಿಯೊಳಗೆ ಇರುವಾಗ, ದೇವಿ ದರ್ಶನ ಪಡೆಯದ ಬಾಳು ನಿರರ್ಥಕ. ಇದು ಕೊನೆಗಾಣಲಿ, ಎಂದು ಬಲಿ ಕೊಡುವ ಕತ್ತಿಯನ್ನು ತೆಗೆದುಕೊಂಡು ತಮ್ಮ ರುಂಡವನ್ನು ದೇವಿ ಅಡಿದಾವರೆಯಲ್ಲಿ ಚಂಡಾಡುವುದರಲ್ಲಿದ್ದರು. ಆಗ ಮಾಯಾ ತೆರೆ ಹಿಂದೆ ಸರಿಯಿತು. ಜಗನ್ಮಾತೆ ಪ್ರತ್ಯಕ್ಷಳಾದಳು. ಸಚ್ಚಿದಾನಂದ ಸ್ವರೂಪಿಣಿಯಲ್ಲಿ ಅವರ ಮನಸ್ಸು ತಲ್ಲೀನವಾಯಿತು. ಬಾಹ್ಯ ಪ್ರಪಂಚಕ್ಕೆ ಬಂದಮೇಲೆ ಅವರ ನಡತೆ ಸಂಪೂರ್ಣ ಬದಲಾಯಿಸಿತು. ಅವರ ಪಾಲಿಗೆ ಕಲ್ಲಿನ ವಿಗ್ರಹ ಮಾಯವಾಗಿ, ಅದೊಂದು ಸಚೇತನ ಮೂರ್ತಿಯಾಯಿತು. ಅಂದಿನಿಂದ ಪೂಜಾ ವಿಧಾನವೇ ಬೇರೆ ರೂಪು ತಾಳಿತು. ದೇವಿ ಅವರು ಕೊಟ್ಟ ನೈವೇದ್ಯವನ್ನು ಊಟ ಮಾಡುತ್ತಿದ್ದಳು. ಮಾಡಿದ ಪೂಜೆಯನ್ನು ಸ್ವೀಕರಿಸುತ್ತಿದ್ದಳು. ಬೇಡಿದ ಪ್ರಾರ್ಥನೆಯನ್ನು ಈಡೇರಿಸುತ್ತಿದ್ದಳು. ಮಗು ತಾಯಿಯೊಂದಿಗೆ ಯಾವ ಸಲಿಗೆಯಲ್ಲಿ ಇರುವುದೋ ಅದೇ ಸಲಿಗೆಯಲ್ಲಿ ಇವರು ಜಗನ್ಮಾತೆಯೊಡನೆ ವರ್ತಿಸುತ್ತಿದ್ದರು.

ಜಗನ್ಮಾತೆ ಪ್ರತ್ಯಕ್ಷಳಾದನಂತರ ಶ್ರೀರಾಮಕೃಷ್ಣರ ಪೂಜಾ ವಿಧಾನ ಬೇರೆ ರೂಪಕ್ಕೆ ತಿರುಗಿತು. ನೈವೇದ್ಯಕ್ಕೆ ಕೊಟ್ಟರೆ ಕೆಲವು ವೇಳೆ ತಾವು ಮೊದಲು ರುಚಿ ನೋಡುವರು, ನಂತರ ದೇವಿಗೆ ಅರ್ಪಣೆ ಮಾಡುತ್ತಿದ್ದರು. ಹೂವು, ಗಂಧ, ದೇವಿಗೆ ಅರ್ಪಣೆಮಾಡುವುದಕ್ಕೆ ಮುಂಚೆ, ಜಗನ್ಮಾತೆ ತಮ್ಮಲ್ಲಿಯೂ ಇರುವಂತೆ ಭಾಸವಾಗಿ ಅದನ್ನು ತಾವೇ ಅಲಂಕರಿಸಿಕೊಳ್ಳುತ್ತಿದ್ದರು. ಮಂಗಳಾರತಿಯನ್ನು ಕೆಲವು ವೇಳೆ ಬಹಳ ಹೊತ್ತು, ಕೆಲವು ವೇಳೆ ಬಹಳ ಬೇಗ ಪೂರೈಸುವರು.

ಸಾಧಾರಣ ಜನರು ಹುಚ್ಚು ಪೂಜಾರಿಯೆಂದು ಇವರನ್ನು ಕರೆಯತೊಡಗಿದರು. ಸಾಧಾರಣವಾಗಿ ಮನುಷ್ಯರು ಮತ್ತೊಬ್ಬರನ್ನು ಅಳೆಯುವ ರೀತಿಯೆ ಹೀಗೆ. ಯಾರು ತಮ್ಮಂತೆ ಇಲ್ಲವೊ ಅವರೆಲ್ಲ ಹುಚ್ಚರು ತಮಗೆ ಮಾತ್ರ ಬುದ್ಧಿ ಸ್ಥಿಮಿತವಾಗಿರುವುದೆಂದು ಭಾವಿಸುವರು.

ದೇವಸ್ಥಾನದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಮಥುರನಾಥ

ನಿಗೂ ಈ ಸುದ್ದಿ ತಿಳಿಯಿತು. ಆತನಿಗೆ ಮೊದಲಿನಿಂದಲೂ ಶ್ರೀರಾಮ
ಕೃಷ್ಣರ ಮೇಲೆ ಗೌರವ. ಇದನ್ನು ಕೇಳಿ ಅತಿ ವ್ಯಾಕುಲನಾಗಿ ತಾ
ಬಂದು ಇದನ್ನು ನೋಡುವವರೆವಿಗೂ, ಯಾರೂ ಇವರಿಗೆ ತೊಂದರೆಯನ
ಕೊಡಕೂಡದೆಂದು ಹೇಳಿಕಳುಹಿಸಿದನು. ಒಂದುದಿನ ಅವನೇ ಬಂದು ಇವ
ಪೂಜಾ ವಿಧಾನವನ್ನು ನೋಡಿ, ಇದು ಹುಚ್ಚಲ್ಲ, ದೇವೋನ್ಮಾದವೆಂದ
ತಿಳಿದು ಯಾರೂ ಅವರಿಗೆ ತೊಂದರೆ ಕೊಡದಂತೆ ಎಚ್ಚರಿಸಿ ಹೋದನು.

ಒಂದು ದಿನ ರಾಣಿ ರಾಸಮಣಿ ಶ್ರೀರಾಮಕೃಷ್ಣರು ಪೂಜೆ ಮಾಡು
ತ್ತಿದ್ದಾಗ ಬಂದರು. ಪೂಜೆಯಾದಮೇಲೆ ರಾಮಕೃಷ್ಣರನ್ನು ಒಂದೆರಡ
ಭಕ್ತಿಯ ಹಾಡನ್ನು ಹಾಡುವಂತೆ ಕೇಳಿಕೊಂಡರು. ಶ್ರೀರಾಮ
ಕೃಷ್ಣರು ಹೇಳುತ್ತಿರುವಾಗ ಆಕೆಯ ಮನಸ್ಸು ಹಾಡಿನಮೇಲೆ ಇರಲಿಲ್ಲ
ನ್ಯಾಯಾಸ್ಥಾನದಲ್ಲಿ ಬರಲಿರುವ ಒಂದು ವ್ಯಾಜ್ಯದಮೇಲೆ ಇತ್ತು
ಶ್ರೀರಾಮಕೃಷ್ಣರು ಇದನ್ನು ಗ್ರಹಿಸಿ ಆಕೆಯ ಹತ್ತಿರ ಹೋಗಿ "ಇಲ್ಲಿಯ
ಪ್ರಾಪಂಚಿಕ ಚಿಂತನೆಯೆ?" ಎಂದು ಏಟುಕೊಟ್ಟರು. ರಾಣಿ ರಾಸಮಣಿ
ತನ್ನ ತಪ್ಪನ್ನು ಒಪ್ಪಿಕೊಂಡು ಕುಪಿತಳಾಗದೆ, ಜಗನ್ಮಾತೆಯೆ ತನಗೆ ಈ
ರೀತಿ ಶಿಕ್ಷಿಸಿದಳೆಂದು ಭಾವಿಸಿದಳು. ಇಂತಹ ಕೆಲವು ದೃಶ್ಯಗಳನ್ನು ಕಂಡ
ಇತರರು ಶ್ರೀರಾಮಕೃಷ್ಣರನ್ನು ಹುಚ್ಚರೆಂದು ಕರೆದರು. ಆದರೆ ರಾಣಿ
ಇವರೊಬ್ಬ ಮಹಾಭಕ್ತರೆಂದು ಗೊತ್ತಾಯಿತು. ವಜ್ರ ವ್ಯಾಪಾರಿಗೆ ಮಾತ್ರ
ವಜ್ರ ಯಾವುದು ಗಾಜಿನ ಚೂರು ಯಾವುದು ಎಂಬುದು ಗೊತ್ತಾಗುವುದು

ರಾಣಿ ರಾಸಮಣಿ, ಮಥುರನಾಥ ಇವರಿಬ್ಬರೂ ಶ್ರೀರಾಮಕೃಷ್ಣ
ಜೀವನದಲ್ಲಿ ಮುಖ್ಯ ಪಾತ್ರವನ್ನು ಪಡೆದಿರುವರು ಎಂಬುದನ್ನು ಆಗಲೆ
ತಿಳಿಸಿರುವೆವು. ಅವರಿಗೂ ರಾಮಕೃಷ್ಣರಿಗೂ ಸಂಬಂಧಪಟ್ಟ ಒಂದೆರಡು
ಘಟನೆಗಳಿಂದ ಪರಮಹಂಸರ ವ್ಯಕ್ತಿತ್ವ ಇನ್ನೂ ಹೆಚ್ಚು ಪ್ರಕಾಶಕ್ಕೆ
ಬರುವುದನ್ನು ನೋಡುತ್ತೇವೆ. ಒಂದು ದಿನ ರಾಧಾಕೃಷ್ಣನ ದೇವಸ್ಥಾನ
ದಲ್ಲಿ ರಾಧಾರಮಣನ ವಿಗ್ರಹದ ಕಾಲು ಪೂಜಾರಿಯ ಅಜಾಗರೂಕತೆ
ಯಿಂದ ಮುರಿದುಹೋಯಿತು. ಭಿನ್ನವಾದ ವಿಗ್ರಹವನ್ನು ಪೂಜಿಸುವುದು
ಅಶಾಸ್ತ್ರೀಯವೆಂದು ಪಂಡಿತರು ಸಾರಿದರು. ಇಷ್ಟು ದಿನವೂ ಪೂಜಿಸು
ತ್ತಿದ್ದ ಆ ವಿಗ್ರಹವನ್ನು ತೆಗೆದಿಡಲು ರಾಣಿಯ ಮನಸ್ಸು ಒಪ್ಪಲಿಲ್ಲ
ವ್ಯಾಕುಲದಲ್ಲಿರುವಾಗ ಶ್ರೀರಾಮಕೃಷ್ಣರು ಹೀಗೆ ಹೇಳಿದರು: "ನಿನ್ನ
ಅಳಿಯ ಮಥುರನಾಥನಿಗೆ ಕಾಲು ಮುರಿದುಹೋದರೆ ಅವನನ್ನು ನೀನು
ಹೊರಗೆ ಕಳುಹಿಸಿ ಬೇರೆ ಅಳಿಯನನ್ನು ಬರಮಾಡಿಕೊಳ್ಳುವೆಯಾ

ಅದರಂತೆಯೇ ವಿಗ್ರಹಕ್ಕೆ ಕಾಲು ಮುರಿದಿದ್ದರೇನಂತೆ ಅದನ್ನು ಸರಿಮಾಡಿ ಉಪಯೋಗಿಸಬಹುದು" ಎಂದರು. ಯಾವ ಶಾಸ್ತ್ರವೂ ಬಗೆ ಹರಿಸದ ಒಂದು ಸಮಸ್ಯೆಯನ್ನು ಶ್ರೀರಾಮಕೃಷ್ಣರು ಪ್ರಪಂಚದಿಂದ ಆರಿಸಿಕೊಂಡ ಒಂದು ಉಪಮಾನದಲ್ಲಿ ಬಗೆಹರಿಸಿದರು.

ಶ್ರೀರಾಮಕೃಷ್ಣರು ಪೂಜೆಗೆ ಒಂದು ದಿನ ಹೂವನ್ನು ಕೊಯ್ಯಲು ಹೋದಾಗ ಆ ಹೂವುಗಳೆಲ್ಲಾ ಆಗಲೆ ವಿರಾಟ್‌ಸ್ವರೂಪಿ ಭಗವಂತನಿಗೆ ಅರ್ಪಿತವಾದಂತೆ ಭಾಸವಾಯಿತು. ಪ್ರತಿಯೊಂದು ಹೂವಿನ ಗಿಡವೂ ಅವನ ಕೈಯಲ್ಲಿರುವ ತುರಾಯಿಯಂತೆ ಕಂಡಿತು. ಅಂದಿನಿಂದ ಬಾಹ್ಯ ಪೂಜೆ ಮಾಡುವುದನ್ನು ಬಿಟ್ಟರು. ಹೃದಯನೇ ಈ ಕೆಲಸವನ್ನು ಕೈಕೊಂಡನು.

ಮಥುರನಾಥನು ಒಂದು ದಿನ ಶ್ರೀ ರಾಮಕೃಷ್ಣರೊಡನೆ ಮಾತನಾಡುತ್ತಿದ್ದಾಗ "ದೇವರೂ ಕೂಡ ನಿಯಮವನ್ನು ಮೀರಲಾರ" ಎಂದನು. ಆಗ ಶ್ರೀ ರಾಮಕೃಷ್ಣರು ದೇವರಿಗೆ ಎಲ್ಲವೂ ಸಾಧ್ಯವೆಂದರು. ಮಥುರನಾಥನು "ಹಾಗಾದರೆ ಬಿಳಿ ದಾಸವಾಳದ ಹೂವು ಬಿಡುವ ಗಿಡದಲ್ಲಿ ಕೆಂಪು ಬಿಡಬಲ್ಲದೆ?" ಎಂದನು. ಶ್ರೀ ರಾಮಕೃಷ್ಣರು ಅವನ "ಇಚ್ಛೆಯಾದರೆ ಬಿಡದೇ ಏನು?" ಎಂದರು. ಮಾರನೆ ದಿನ ತೋಟದಲ್ಲಿ ಹೋಗುತ್ತಿದ್ದಾಗ ಬಿಳೀ ದಾಸವಾಳದ ಗಿಡದಲ್ಲಿ ಒಂದು ಅಪರೂಪವಾಗಿ ಕೆಂಪು ದಾಸವಾಳ ಬಿಟ್ಟಿರುವುದನ್ನು ನೋಡಿದರು. ಅದನ್ನು ಮಥುರನಾಥನಿಗೆ ತೋರಿಸಿ "ನೋಡು ದೇವರಿಗೆ ಯಾವುದು ಅಸಾಧ್ಯ" ಎಂದರು. ಮಥುರನು "ಅಬ್ಬ ನಿಮ್ಮ ಹತ್ತಿರ ಮಾತನಾಡುವುದು ತುಂಬಾ ಕಷ್ಟ!" ಎಂದು ತೆಪ್ಪಗಾದನು.

ಮತ್ತೊಂದು ದಿನ ದೇವಸ್ಥಾನಕ್ಕೆ ಕಳ್ಳರು ನುಗ್ಗಿ ವಿಗ್ರಹದ ಮೇಲಿದ್ದ ಒಡವೆಗಳನ್ನೆಲ್ಲಾ ಅಪಹರಿಸಿದರು. ಮಥುರನು ಇದನ್ನು ಕೇಳಿ ಅತಿ ವ್ಯಾಕುಲನಾಗಿ ಶ್ರೀ ರಾಮಕೃಷ್ಣರ ಹತ್ತಿರ ಬಂದು "ಏನು ದೇವರು ತನ್ನ ಮೇಲಿರುವ ಒಡವೆಗಳನ್ನು ಕೂಡ ಕಳ್ಳರಿಂದ ಕಾಪಾಡಿಕೊಳ್ಳಲಾರದೆ ಹೋದನಲ್ಲ" ಎಂದನು. ಶ್ರೀ ರಾಮಕೃಷ್ಣರು ಇದನ್ನು ಕೇಳಿ "ಓ! ಏನು ಮಾತನಾಡುವೆ. ನಿನಗೆ ಅದು ಒಡವೆ, ಬೆಲೆ ಬಾಳತಕ್ಕದ್ದು. ದೇವರಿಗೆ ಅದು ಮಣ್ಣಿಗೆ ಸಮಾನ. ದೇವರ ಮನೆ ಬಾಗಿಲನ್ನು ಕುಬೇರ ಕಾಯುತ್ತಿರುವಾಗ ನಿನ್ನ ಒಂದೆರಡು ಒಡವೆ ಮತ್ತಾರೊ ಹೊತ್ತುಕೊಂಡು ಹೋದರೆ ಅದನ್ನು ದೇವರು ಗಮನಿಸುವನೆ"

ಎಂದರು.

ಸಾಧಾರಣ ಮನುಷ್ಯರು ದೇವರ ಮಹಾತ್ಮೆಯನ್ನು ಅಳೆಯುವುದು ಹೀಗೆ. ಆ ಒಡವೆ ತೆಗೆದುಕೊಂಡು ಹೋಗುವ ಸಮಯದಲ್ಲಿ ಕಳ್ಳನೇನಾದರೂ ರಕ್ತಕಾರಿ ಸತ್ತಿದ್ದರೆ ಪರವಾ ಇಲ್ಲ, ದೇವರಲ್ಲಿ ಏನು ಸತ್ಯವಿದೆ ಎನ್ನುವರು. ಏನೂ ಆಗದೆ ಹೋದರೆ ಅಯ್ಯೋ ಮಹಾತ್ಮೆ ಏನು ಇದೆ ಎನ್ನುವರು. ದೇವರಿಗೆ ಸತ್ಪುರುಷ ಹೇಗೆ ಒಬ್ಬ ಮಗನೋ ಹಾಗೆಯೇ ಕಳ್ಳನೂ ಒಬ್ಬಮಗ, ಎಂಬ ಭಾವ ಬರಬೇಕಾದರೆ ಜೀವ ತುಂಬಾ ಮುಂದುವರಿದಿರಬೇಕು.

ಶ್ರೀ ರಾಮಕೃಷ್ಣರು ಅಸಾಧಾರಣ ರೀತಿಯಲ್ಲಿ ವ್ಯವಹರಿಸುತ್ತ ಇದ್ದುದು ಸಾದಾರಣ ಜನರಿಗೆ ಗೊತ್ತಾಗಲಿಲ್ಲ. ಇವರು ಹುಚ್ಚರಾಗಿ ಹೋಗಿರುವರು ಎಂಬ ಸುದ್ದಿ ಸುತ್ತಲೂ ಹಬ್ಬಿತು. ಇದು ಕಾಮಾರಪುಕುರಕ್ಕೂ ಮುಟ್ಟಿತು. ಶ್ರೀ ರಾಮಕೃಷ್ಣರ ತಾಯಿ ಚಂದ್ರಮಣಿದೇವಿ ೧೮೫೮ ರಲ್ಲಿ ಮಗನನ್ನು ಕಾಮಾರಪುಕುರಕ್ಕೆ ಕರೆದುಕೊಂಡು ಬಂದರು. ಔಷದೋಪಚಾರ, ಯಂತ್ರ ಮಂತ್ರಗಳೆಲ್ಲವನ್ನು ಮಾಡಿಸಿದರು. ಆದರೆ ಇವರ ಹುಚ್ಚು ಮಾಯವಾಗುವ ರೀತಿ ಕಾಣಲಿಲ್ಲ. ಪರಮಹಂಸರೆ ಒಂದುಸಲ ಹಾಸ್ಯವಾಗಿ ಬೇಕಾದರೆ ನನಗೆ ರೋಗವಿದ್ದರೆ ಗುಣಮಾಡಿ; ಆದರೆ ದೇವರ ಹುಚ್ಚನ್ನು ಮಾತ್ರ ಬಿಡಿಸಬೇಡಿ ಎಂದರು. ಯಾರೋ ಚಂದ್ರಮಣಿದೇವಿಗೆ, ಮಗನಿಗೆ ಮದುವೆ ಮಾಡಿದರೆ ಹುಚ್ಚು ಬಿಟ್ಟು ಹೋಗುವುದೆಂದು ಹೇಳಿದರು. ಹೆಣ್ಣಿಗೆ ಬೇಕಾದಷ್ಟು ಹುಡುಕ ತೊಡಗಿದರು. ಸುಮಾರು ಮೂರು ಮೈಲಿ ದೂರದ ಜಯರಾಮವಟಿ ಎಂಬ ಗ್ರಾಮದಲ್ಲಿ ರಾಮಚಂದ್ರ ಮುಖ್ಯೋಪಾಧ್ಯಾಯರ ಮನೆಯಲ್ಲಿ ಐದು ವರುಷದ ಒಂದು ಹೆಣ್ಣು ಮಗು ಸಿಕ್ಕಿತು. ಆಗ ಶ್ರೀ ರಾಮಕೃಷ್ಣರಿಗೆ ೨೩ ವಯಸ್ಸು. ವಧುವರರಿಗೆ ಅಂತರ ಹದಿನೆಂಟು ವರುಷ! ಅಂತೂ ಮದುವೆಯಾಯಿತು. ಈ ಮದುವೆಯ ಗುರಿ ಶ್ರೀ ರಾಮಕೃಷ್ಣರಿಗೆ ಹಿಡಿದ ದೇವರ ಹುಚ್ಚನ್ನು ಬಿಡಿಸುವುದು. ಆದರೆ ಇವರ ಭವಿಷ್ಯ ಜೀವನ, ಮದುವೆ ಮಾಡಿದ ಉದ್ದೇಶ ಸಫಲವಾಗಲಿಲ್ಲವೆಂಬುದಕ್ಕೆ ಉದಾಹರಣೆಯಾಗಿದೆ.

ಮದುವೆಯಾದ ಕೆಲವು ತಿಂಗಳ ಮೇಲೆ ಶ್ರೀ ರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಹಿಂತಿರುಗಿದರು. ಆಧ್ಯಾತ್ಮಿಕ ಘಟನಾವಳಿಗಳ ಮಧ್ಯದಲ್ಲಿ ಅವರ ಜೀವನ ಸುಟ್ಟರೆಯ ಮಧ್ಯದಲ್ಲಿ ಸುತ್ತುತ್ತಿರುವ ತರಗೆಲೆಯಂತೆ

ಆಯಿತು. ಧ್ಯಾನಕ್ಕೆ ಕುಳಿತರೆಂದರೆ ಶಿಲಾ ವಿಗ್ರಹದಂತೆ ಆಗುತ್ತಿದ್ದರು. ಇವರ ಅಚಲ ದೇಹವನ್ನು ನೋಡಿ ಹಕ್ಕಿಗಳು ನಿರ್ಭಯವಾಗಿ ಇವರ ದೇಹದ ಮೇಲೆ ಕುಳಿತುಕೊಳ್ಳುತ್ತಿದ್ದುವು.

ಶ್ರೀ ರಾಮಕೃಷ್ಣರು ದೇವಿಯ ದರ್ಶನವನ್ನೇನೊ ಪಡೆದಿದ್ದರು. ಆದರೆ ಅದರಲ್ಲಿ ತೃಪ್ತರಾಗಲಿಲ್ಲ. ದೇವರನ್ನು ಎಷ್ಟೆಷ್ಟು ರೂಪಿನಲ್ಲಿ ನೋಡಲು ಸಾಧ್ಯವೊ ಅಷ್ಟು ರೂಪಿನಲ್ಲೆಲ್ಲಾ ನೋಡಲು ಬಯಸಿದರು. ಹಲವು ಭಾವದ ಮೂಲಕ ಅವನನ್ನು ಪ್ರೀತಿಸಿದರು. ಹಲವು ಸಾಧನೆ ಯನ್ನು ಮಾಡಿದರು. ಹಲವು ಧರ್ಮವನ್ನು ಅನುಷ್ಠಾನ ಮಾಡಿದರು. ಹಲವು ದಾರಿಯಲ್ಲಿ ನಡೆದು ಒಂದು ಸತ್ಯದೆಡೆಗೆ ಬಂದರು. ಸತ್ಯ ದೇಗುಲಕ್ಕೆ ಬರುವುದಕ್ಕೆ ಅನಂತ ಬಾಗಿಲುಗಳಿವೆ ಎಂಬುದು ಅವರ ಅನುಭವದ ಆಳದಿಂದ ಬಂದ ಮಾತು. ಕೇವಲ ತರ್ಕದ ಗರಡಿಯಿಂದ ಬಂದುದಲ್ಲ. ಎಲ್ಲಾ ಧರ್ಮದಲ್ಲಿರುವ ಏಕಮಾತ್ರ ಸತ್ಯದ ಅನುಭವ ಇವರಿಗೆ ಕರಗತವಾದುದರಿಂದ ಇವರು ಯಾರನ್ನೂ ದೂರುತ್ತಿರಲಿಲ್ಲ. ಯಾವ ಧರ್ಮವನ್ನೂ ತಾತ್ಸಾರದಿಂದ ಕಾಣುತ್ತಿರಲಿಲ್ಲ.

ಶ್ರೀ ರಾಮಕೃಷ್ಣರ ಸಾಧನೆಯಲ್ಲಿ ಒಂದು ವೈಶಿಷ್ಟ್ಯವನ್ನು ನೋಡು ತ್ತೇವೆ. ಇವರು ಗುರುಗಳನ್ನು ಹುಡುಕಿಕೊಂಡು ಹೋಗಬೇಕಾಗಿರಲಿಲ್ಲ. ಗುರುಗಳು ಇವರೆಡೆಗೆ ಬಂದರು. ಒಂದೊಂದು ಸಾಧನೆಗೆ ಆಯಾ ಪಥ ದಲ್ಲಿ ನುರಿತ ಗುರುವೊಬ್ಬನು ಹೇಗೋ ಇವರ ಸಮೀಪಕ್ಕೆ ಆಕರ್ಷಿಸಲ್ಪಟ್ಟು ಇವರನ್ನು ಮುಂದಕ್ಕೆ ಕರೆದುಕೊಂಡು ಹೋಗುವರು. ಶಾಕ್ತ ಮತ್ತು ವೈಷ್ಣವ ಸಾಧನೆಗಳು ಭೈರವಿಬ್ರಾಹ್ಮಣಿ ಎಂಬ ಘನ ವಿದುಶಿಯ ನೇತೃತ್ವದಲ್ಲಿ ನಡೆಯಿತು. ಆಕೆ ಇಂತಹ ಸಾಧಕನೊಬ್ಬನು ಸಿಕ್ಕಿಯಾನೆ ಎಂದು ಹುಡುಕುತ್ತಿದ್ದಾಗ, ಶ್ರೀ ರಾಮಕೃಷ್ಣರು ಅವರಿಗೆ ಗೋಚರಿಸಿದರು. ವಾತ್ಸಲ್ಯ ಭಾವಕ್ಕೆ ರಾಮಲಾಲನೆಂಬ ಒಬ್ಬ ರಾಮಭಕ್ತನ ಪರಿಚಯ ವಾಯಿತು. ಅದ್ವೈತ ಸಾಧನೆಗೆ ತೋತಾಪುರಿ ಎಂಬ ಸನ್ಯಾಸಿಯ ಸಹಾಯ ದೊರಕಿತು. ಕ್ರೈಸ್ತ ಮತ್ತು ಮುಹಮ್ಮದೀಯ ಸಾಧನೆಗಳಿಗೆ ಆಯಾ ಮತದ ಅತ್ಯುತ್ತಮ ಪ್ರತಿನಿಧಿಗಳ ಸಹಾಯ ದೊರಕಿತು. ಘನ ವಿದ್ವಾಂಸರು ಅವರ ಸಮೀಪಕ್ಕೆ ಬಂದರು. ಅತಿ ಮುಂದುವರಿದ ಸಾಧಕರು ಅವರ ಸಮೀಪಕ್ಕೆ ಬಂದರು. ಎಲ್ಲರಿಂದಲೂ ಶ್ರೀ ರಾಮ ಕೃಷ್ಣರು ಕೆಲವು ವಿಷಯಗಳನ್ನು ಕಲಿತರು. "ನಾನು ಎಲ್ಲಿಯವರೆಗೂ ಬದುಕಿರುವೆನೊ ಅಲ್ಲಿಯವರೆವಿಗೂ ಹೊಸದಾಗಿ ಕಲಿಯುತ್ತೇನೆ" ಎನ್ನು

ತ್ತಿದ್ದರು. ಈ ದೈನ್ಯವನ್ನು ಕೊನೆಯ ತನಕ ಶ್ರೀ ರಾಮಕೃಷ್ಣರಲ್ಲಿ ಕಾಣುತ್ತೇವೆ.

ಶ್ರೀ ರಾಮಕೃಷ್ಣರು ತಮ್ಮದೇ ಆದ ಸರಳ ರೀತಿಯಲ್ಲಿ ಭಗವಂತ ನಿಗೂ ಭಕ್ತನಿಗೂ ಮಧ್ಯೆ ಇರುವ ತೊಡರುಗಳನ್ನು ಛೇಧಿಸಲು ಮೊದಲು ಮಾಡಿದರು. ದ್ರವ್ಯದ ಮೇಲಿರುವ ಆಸೆ ಸಂಪೂರ್ಣ ತೊಲಗುವಂತೆ ಒಂದು ಕೈಯಲ್ಲಿ ರೂಪಾಯಿಯನ್ನು ಮತ್ತೊಂದು ಕೈಯಲ್ಲಿ ಮಣ್ಣನ್ನು ತೆಗೆದುಕೊಂಡು ಗಂಗಾನದಿ ತೀರದ ಮೇಲೆ ಕುಳಿತು ಹಣವನ್ನು ನೋಡಿ, ಮತ್ತೊಂದು ಕೈಯ್ಯಲ್ಲಿರುವ ಮಣ್ಣಿಗಿಂತ ಇದು ಮೇಲಲ್ಲ; ಇದು ದೇವರ ಸಮೀಪಕ್ಕೆ ಕರೆದುಕೊಂಡು ಹೋಗುವುದಕ್ಕೆ ಬದಲಾಗಿ ಲೋಭ ಮಾರ್ಗದಲ್ಲಿ ಸಿಲುಕಿಸುವುದು; ಎಂದು ತರ್ಕಿಸಿ ಎರಡನ್ನೂ ನೀರಿಗೆ ಬಿಸಾಡುತ್ತಿದ್ದರು. ಇವರು ಯಾವುದನ್ನು ಧಿಃಕ್ಕರಿಸಿದ್ದರೋ ಅದನ್ನು ಇವರ ಇಡೀ ದೇಹದ ಅಂಗೋಪಾಂಗಗಳು ಧಿಃಕ್ಕರಿಸಿದ್ದುವು. ಮನಸ್ಸಿಗೆ ಅರಿವಾಗದೆ ದೇಹಕ್ಕೆ ಸೋಕಿದರೂ ಚೇಳು ಕುಟುಕಿದಂತೆ ಆಗಿ ಅದನ್ನು ಹತ್ತಿರಕ್ಕೆ ಸೇರಿಸುತ್ತಿರಲಿಲ್ಲ.

ಇದರಂತೆ ಕಾಮಿನಿಯೂ ಕೂಡ. ಶ್ರೀ ರಾಮಕೃಷ್ಣರು ಹೆಂಗಸ ರನ್ನು ದೂರದೇ ಕಾಮದೃಷ್ಟಿಯಿಂದ ನೋಡುವುದನ್ನು ಬಿಟ್ಟರು. ಎಲ್ಲ ರಲ್ಲೂ ಜಗನ್ಮಾತೆಯೆ ಹಲವು ರೂಪಿನಿಂದ ಕಾಣುತ್ತಿರುವಳೆಂದು ಇಡೀ ಸ್ತ್ರೀ ಕುಲವನ್ನೇ ಪೂಜ್ಯ ದೃಷ್ಟಿಯಿಂದ ನೋಡುತ್ತಿದ್ದರು.

ಉಚ್ಚ ಬ್ರಾಹ್ಮಣನ ಕುಲದಿಂದ ಬಂದವನು ತಾನೆಂಬ ಅಹಂಕಾರ ವನ್ನು ಅಳಿಸುವುದಕ್ಕಾಗಿ ಚಂಡಾಲನ ಮನೆಯನ್ನು ಕೂಡ ಇವರು ಗುಡಿಸಿದರು.

ಮಾನವನು ಯಾವ ಯಾವ ಭಾವದ ಮೂಲಕ ಮತ್ತೊಬ್ಬ ಮಾನವನನ್ನು ಪ್ರೀತಿಸಬಹುದೋ ಆ ಭಾವಗಳೆಲ್ಲದರ ಮೂಲಕ ದೇವ ರನ್ನು ಪ್ರೀತಿಸಬಹುದು. ಪ್ರೀತಿ, ಭಕ್ತ ಮತ್ತು ಭಗವಂತನನ್ನು ಬಂಧಿ ಸುವ ಒಂದು ಮಧುರ ಬಂಧನ. ಎಲ್ಲಿಯವರೆವಿಗೂ ನಾವು ಮಾನವರೊ ಅಲ್ಲಿಯವರೆವಿಗೆ ಮಾನವ ಸಹಜ ಪ್ರೀತಿಯ ಮೂಲಕ ಮಾತ್ರ ದೇವರನ್ನು ಪ್ರೀತಿಸಬಲ್ಲೆವು. ಇಂತಹ ಪ್ರೀತಿಯಲ್ಲಿ ಐದು ಮುಖ್ಯ ಭಾವಗಳಿವೆ. ಶಾಂತ ಭಾವ, ದೇವರನ್ನು ತಂದೆ ಅಥವಾ ತಾಯಿಯಂತೆ ಭಾವಿಸ ಬಹುದು. ಜೀವನದಲ್ಲಿ ಮಗುವಿಗೆ ತಂದೆ ತಾಯಿಗಳಷ್ಟು ಅಭಯವನ್ನು ಕೊಡುವವರು ಮತ್ತಾರು ದೊರಕಲಾರರು. ಅವರಲ್ಲಿರುವಷ್ಟು ಸಲಿಗೆ

ಮಾತ್ರಾರಲ್ಲಿಯೂ ಇರಲಾರದು. ಇಡೀ ಬ್ರಹ್ಮಾಂಡ ಅವನಿಂದ ಬಂದಿದೆ; ನಮ್ಮನ್ನು ದುಃಖಸಂಕಟಗಳಿಂದ ಪಾರುಮಾಡುವ ಮಹಾ ಶಕ್ತಿ ಗಣಿಯಾಗಿರುವನು. ಆದಕಾರಣವೆ ಅವನನ್ನು ತಂದೆ ಅಥವಾ ತಾಯಿ ಎಂದು ಕರೆಯುವುದು. ಶ್ರೀ ರಾಮಕೃಷ್ಣರು ಮುಕ್ಕಾಲುಪಾಲು ತಮ್ಮ ಭಾವ ಜೀವನವನ್ನು ಕಳೆಯುತ್ತಿದ್ದುದು ಜಗನ್ಮಾತೆಯನ್ನು ನೆಚ್ಚಿಕೊಂಡಿರುವ ಮಗುವಿನಂತೆ. ಆತನನ್ನು ಕೆಲವು ವೇಳೆ ತಂದೆಯೆಂತಲೂ ಕರೆದರು. ಹಲವಾರು ದೇವರ ಮೂಲಕವೂ ನೋಡಿದರು.

ದಾಸ್ಯಭಾವದಲ್ಲಿ ಭಗವಂತ ಸ್ವಾಮಿಯಾಗುವನು. ಭಕ್ತ ಅವನ ಆಣತಿಯನ್ನು ಪರಿಪಾಲಿಸುವ ಭೃತ್ಯನಾಗುವನು. ಭಕ್ತನಿಗೆ ತನಗಾಗಿ ಏನನ್ನೂ ಸಾಧಿಸಬೇಕೆಂಬ ಆಸೆ ಇರುವುದಿಲ್ಲ. ಅವನಿಗೆ ಸ್ವಾಮಿಯ ಹಿತ ತನ್ನ ಹಿತ, ಸ್ವಾಮಿಯ ಇಷ್ಟ ತನ್ನ ಇಷ್ಟ, ಸ್ವಾಮಿಯ ಜಯ ತನ್ನ ಜಯ. ಈ ಭೃತ್ಯಭಾವದಲ್ಲಿರಬೇಕಾದರೆ ಅಹಂಕಾರ ಸಂಪೂರ್ಣ ನಾಶವಾಗಿರಬೇಕು. ಆಗ ಮಾತ್ರ ಎಲ್ಲ ಭಗವಂತನಿಗೆ ಎಂಬ ಮಧುರಗಾನ ಪಲ್ಲವಿ ಅವನ ಜೀವನದಿಂದ ಹೊರಹೊಮ್ಮುವುದು. ಹನುಮಂತನು ಶ್ರೀರಾಮಚಂದ್ರನನ್ನು ನೋಡುತ್ತಿದ್ದುದು ಹೀಗೆ. ಹನುಮಂತನಿಗೆ ರಾಮ ಇಷ್ಟದೇವನಾಗುವನು. ಶ್ರೀರಾಮನ ಆಣತಿಯನ್ನು ಪರಿಪಾಲಿಸುವುದೊಂದೆ ಇವನ ಜೀವನದ ಮಹೋದ್ದೇಶ. ಅದಕ್ಕಾಗಿ ತನ್ನ ಸರ್ವಸ್ವವನ್ನೂ ಧಾರೆ ಎರೆಯುವನು. ವೀರಾದಿವೀರನಾದರೂ ರಾಮಾಯಣದಲ್ಲಿ ಬರುವ ಹನುಮಂತ ನಿಗರ್ವಿ, ವಿನಯಶಾಲಿ. ಅಶೋಕವನದಲ್ಲಿ ದುಃಖದಿಂದ ಕೊರಗುತ್ತಿದ್ದ ಸೀತಾದೇವಿಯನ್ನು ನೋಡಲು ಹೋದಾಗ ಶ್ರೀರಾಮಚಂದ್ರನ ಸುದ್ದಿಯನ್ನು ಅವಳಿಗೆ ಹೇಳಿದನು. ಇನ್ನೇನು ಶ್ರೀರಾಮನು ಬೇಗ ಬರುವನು, ನಿನ್ನನ್ನು ಸೆರೆಯಿಂದ ಬಿಡಿಸುವನು ಎಂದು ಧೈರ್ಯ ಹೇಳಿದನು. ಆದರೆ ಸೀತೆಗೆ ರಾಮನ ಜೊತೆಯಲ್ಲಿ ಬರುವವರ ಸಾಹಸದಲ್ಲಿ ನಂಬಿಕೆ ಇರಲಿಲ್ಲ. ಆಕೆಗೆ ಹನುಮಂತ ಸುಗ್ರೀವನ ಸೈನ್ಯದಲ್ಲಿ ತಾನೆ ಕೊನೆಯವನೆಂದು ಹೇಳುತ್ತಾನೆ. ಯಾರು ವೀರಾದಿವೀರನೋ, ಜಗಜ್ಜಟ್ಟಿಯೋ ಅಂತಹವನು ಹಾಗೆ ಹೇಳಿಕೊಳ್ಳಬೇಕಾದರೆ ಎಷ್ಟು ಅಹಂಕಾರದಿಂದ ಆ ವ್ಯಕ್ತಿ ಪಾರಾಗಿರುವನು ಎಂಬುದನ್ನು ಊಹಿಸಬಹುದು.

ಪರಮಹಂಸರು ದಾಸ್ಯಭಾವವನ್ನು ಹನುಮಂತನಂತೆ ಅಭ್ಯಾಸ ಮಾಡಿದರು. ಗೆಡ್ಡೆಗೆಣಸುಗಳನ್ನು ತಿಂದು, ಮರದಮೇಲೆ ನೆಗೆದಾಡು

ತ್ತಿದ್ದರಂತೆ ಆ ಕಾಲವಲ್ಲಿ. ಶ್ರೀರಾಮ ಮತ್ತು ಸೀತಾದೇವಿಯ ದರ್ಶನ ವನ್ನು ಆ ಭಾವದಲ್ಲಿ ಇದ್ದಾಗ ಪಡೆದರು.

ಸಖ್ಯಭಾವದಲ್ಲಿ ಭಕ್ತನಿಗೆ ಭಗವಂತನಲ್ಲಿ ಒಂದು ನಿಕಟತೆ ಕಾಣು ವುದು. ದೊಡ್ಡವನು ಚಿಕ್ಕವನು ಎಂಬ ಭಾವ ಮಾಯವಾಗುವುದು. ಭಗವಂತನಲ್ಲಿರುವ ಶಕ್ತಿಗಾಗಿ ಸ್ನೇಹಿತ ಅವನನ್ನು ಪ್ರೀತಿಸುವುದಿಲ್ಲ. ಕೇವಲ ಪ್ರೀತಿಗಾಗಿ ಪ್ರೀತಿಸುತ್ತಾನೆ. ಅನ್ಯೋನ್ಯ ಸಲಿಗೆ ಹೆಚ್ಚುವುದು. ಕೃಷ್ಣಾರ್ಜುನರ ಸಂಬಂಧ ಸಖ್ಯಭಾವಕ್ಕೆ ಉದಾಹರಣೆ. ಶ್ರೀರಾಮ ಕೃಷ್ಣರು ಈ ಭಾವದಲ್ಲಿಯೂ ಕೆಲವು ಕಾಲ ತಲ್ಲೀನರಾಗಿದ್ದರು.

ವಾತ್ಸಲ್ಯಭಾವದಲ್ಲಿ ಭಕ್ತ ಭಗವಂತನನ್ನು ತನ್ನ ಮಗುವೆಂದು ತಿಳಿಯುವನು. ತಾಯಿಗೆ ಮಗುವಿನ ಮೇಲೆ ಇರುವ ಪ್ರೀತಿಯಲ್ಲಿ ಸಂಪೂರ್ಣ ನಿಸ್ವಾರ್ಥತೆ ಕಾಣುವುದು. ಮಗುವಿನಿಂದ ತಾಯಿ ಏನನ್ನೂ ಅಪೇಕ್ಷಿಸುವುದಿಲ್ಲ. ಸದಾ ಮಗುವಿನ ಹಿತಕ್ಕೆ ತನ್ನ ನಿದ್ದೆ, ಸುಖ ಎಲ್ಲ ವನ್ನೂ ತೆರಲು ಸಿದ್ಧಳಾಗಿರುವಳು. ಎಲ್ಲಿಯವರೆವಿಗೂ ಲಾಭದ ಅಪೇಕ್ಷೆ ಸ್ವಲ್ಪವಾದರೂ ಇದೆಯೋ, ಅಲ್ಲಿಯವರಿವಿಗೆ, ಇಂತಹ ಪ್ರೇಮ ಸಾಧ್ಯವಿಲ್ಲ. ಯಶೋದೆ ಶ್ರೀಕೃಷ್ಣನನ್ನು ಪ್ರೀತಿಸಿದ ರೀತಿ ಇದು, ಕೌಸಲ್ಯೆ ರಾಮ ನನ್ನು ಪ್ರೀತಿಸಿದ ರೀತಿ ಇದು. ಶ್ರೀರಾಮಕೃಷ್ಣರು ಈ ಭಾವದಲ್ಲಿದ್ದಾಗ ದೇವರನ್ನು ರಾಮಲಾಲನೆಂದು ಪ್ರೀತಿಸಿದರು.

ಮಧುರಭಾವದಲ್ಲಿ ಭಕ್ತ ಭಗವಂತರಿಗೆ ಪ್ರೇಯಕ ಪ್ರೇಯಸಿ ಸಂಬಂಧವಿರುವುದು. ಮಾನವ ಪ್ರೇಮದಲ್ಲೆಲ್ಲ ಅತ್ಯಂತ ನಿಕಟವಾದುದು ಪ್ರೇಯಕ ಮತ್ತು ಪ್ರೇಯಸಿಯರದು. ಗೋಪಿಯರು ಶ್ರೀಕೃಷ್ಣನನ್ನು ಪ್ರೀತಿಸಿದ ರೀತಿ ಇದು. ಶ್ರೀರಾಮಕೃಷ್ಣರು ಈ ಭಾವದಲ್ಲಿರುವಾಗ ಹೆಂಗಸಿನಂತೆ ಸೀರೆ ಉಟ್ಟು, ಆಭರಣವಿಟ್ಟುಕೊಂಡು ರಾಧಾರಮಣನನ್ನು ಸೇವಿಸಿದರು.

ಶ್ರೀರಾಮಕೃಷ್ಣರ ಭಾವಜೀವನ ಸರ್ವತೋಮುಖವಾದುದು. ಯಾವ ಯಾವ ಭಾವದ ಮೂಲಕ ಭಗವಂತನನ್ನು ನೋಡಬಹುದೋ ಅದರ ಮೂಲಕ ನೋಡಿದರು. ಒಂದೊಂದುಸಲ ಒಂದೊಂದು ಭಾವದಲ್ಲಿ ತಲ್ಲೀನರಾಗುತ್ತಿದ್ದರು.

ಸಗುಣೋಪಾಸನೆಯಲ್ಲಿ ಮಾತ್ರ ಭಾವಕ್ಕೆ ಅವಕಾಶವಿದೆ. ಆದರೆ ಸಗುಣವೆಂಬ ಅಲೆಗಳ ಹಿಂದೆ, ನಿರ್ಗುಣ ನಿರಾಕಾರದ ಕಡಲಿದೆ. ಶ್ರೀರಾಮ ಕೃಷ್ಣರು ತೋತಾಪುರಿ ಎಂಬ ಸನ್ಯಾಸಿಯಿಂದ ಅದ್ವೈತ ದೀಕ್ಷೆಯನ್ನು

ಪಡೆದು, ನಾಮರೂಪಗಳನ್ನು ಮೀರಿ, ಕಾರ್ಯಕಾರಣ ಜಗತ್ತನ್ನು ಅತಿಕ್ರಮಿಸಿ, ನಿರಾಕಾರ ಬ್ರಹ್ಮದ ಕಡಲಿಗೆ ಧುಮಿಕಿ ತಲ್ಲೀನರಾದರು. ಆ ಸ್ಥಿತಿಯಲ್ಲಿಯೇ ಅವರು ಬಹುಕಾಲವಿದ್ದರು. ಕ್ರಮೇಣ ಜಗನ್ಮಾಯಿ ಅವರ ಮನಸ್ಸನ್ನು ಕೆಳಗಿಳಿಸಿ ಸಾಕಾರ ನಿರಾಕಾರಗಳ ಮಧ್ಯೆ ಅವರನ್ನು ಬಿಟ್ಟು ನೀನು ಇಲ್ಲಿ ಇರು ಎಂದು ಆಜ್ಞಾಪಿಸಿದಳಂತೆ.

ಎಲ್ಲಾ ಧರ್ಮಗಳಲ್ಲಿಯೂ ಸತ್ಯವೆಂಬ ತತ್ತ್ವವಿದೆ. ಅದನ್ನು ನಿದರ್ಶಿಸುವುದಕ್ಕೆ ಬರೆದ ಪುರಾಣಗಳಿವೆ. ಅದನ್ನು ಅನುಷ್ಠಾನಕ್ಕೆ ತರಲು ಬಾಹ್ಯ ಆಚರಣೆಗಳಿವೆ. ಒಂದೇ ಬಾಹ್ಯ ಆಚಾರ ಅಥವಾ ಪುರಾಣ ಎಲ್ಲ ಧರ್ಮದಲ್ಲಿಯೂ ಇಲ್ಲದೆ ಇರಬಹುದು. ಆದರೆ ಅವುಗಳ ಗುರಿಯೆಲ್ಲ ಒಂದೆ. ಅನೇಕ ವೇಳೆ ಮತಾಂಧರು ತಮ್ಮ ಪುರಾಣ ನಿಜವಾಗಿ ನಡೆದಿದ್ದು ಉಳಿದ ಧರ್ಮಗಳ ಪುರಾಣ, ಕಂತೆಪುರಾಣವೆನ್ನುವರು. ಆದರೆ ಎಲ್ಲಾ ಧರ್ಮದ ಪುರಾಣವೂ ಪುರಾಣವೆ. ಅದರ ಹಿಂದೆ ಕೆಲವು ಚಾರಿತ್ರಿಕ ಅಂಶಗಳು ಇರಬಹುದು. ಆದರೆ ಅಲ್ಲಿ ಪ್ರಾಮುಖ್ಯತೆ ಅದಕ್ಕೆ ಅಲ್ಲ. ಪುರಾಣ ಬರುವುದು ಒಂದು ಆಧ್ಯಾತ್ಮಿಕ ಸತ್ಯವನ್ನು ನಿದರ್ಶಿಸುವುದಕ್ಕೆ. ಅದು ಚಾರಿತ್ರಿಕ ದೃಷ್ಟಿಯಿಂದ ಸರಿಯಲ್ಲದೇ ಹೋದರೂ ಪಾರಮಾರ್ಥಿಕ ದೃಷ್ಟಿಯಿಂದ ಅದಕ್ಕೆ ಬೆಲೆ ಇದೆ. ರಾಮಾಯಣ ಮಹಾಭಾರತದಲ್ಲಿ ಬರುವ ವ್ಯಕ್ತಿಗಳು ಚಾರಿತ್ರಿಕ ವ್ಯಕ್ತಿಗಳಲ್ಲದೇ ಇರಬಹುದು. ಆದರೆ ಅವರು ಒಂದು ಆದರ್ಶ. ಮಾನವ ಅದರಂತೆ ಆಗಬಹುದು ಎಂಬುದನ್ನು ತೋರುತ್ತವೆ.

ನಾವು ಅನುಷ್ಠಾನ ಪ್ರಪಂಚಕ್ಕೆ ಇಳಿಯುವಾಗ ಬಾಹ್ಯ ಸಲಕರಣೆಗಳೆಲ್ಲ ಬೇಕಾಗುವುದು. ಎಲ್ಲಿಯವರೆವಿಗೂ ತಾತ್ತ್ವಿಕ ರಂಗದಲ್ಲಿ ನಿಂತು ವಾದ ಮಾಡುತ್ತಿರುವೆವೋ, ಅಲ್ಲಿಯವರೆವಿಗೆ ದೇವರನ್ನು ನಿರ್ಗುಣ ನಿರಾಕಾರ ನಿರಂಜನನೆಂದು ಹೇಳುತ್ತಿರಬಹುದು. ಆದರೆ ನಾವು ಅವನನ್ನು ಕುರಿತು ಚಿಂತಿಸಬೇಕಾದರೆ ನಿರಾಕಾರಕ್ಕೆ ಒಂದು ಆಕಾರ ಕೊಡಬೇಕು, ನಿರ್ಗುಣನಿಗೆ ಗುಣಲೇಪನ ಮಾಡಬೇಕು. ಸರ್ವಾಂತರ್ಯಾಮಿಗೆ ಒಂದು ಸ್ಥಳವನ್ನು ಕಲ್ಪಿಸಬೇಕು. ಆದಕಾರಣವೇ ಎಲ್ಲಾ ಧರ್ಮದಲ್ಲಿಯೂ ಚರ್ಚು, ಮಸೀತಿ, ದೇವಸ್ಥಾನಗಳು ಹುಟ್ಟಿರುವುದು. ಯಾರು ವಿಗ್ರಹವನ್ನು ಹಳಿದಿರುವರೋ ಅವರು ಮತ್ತಾವುದನ್ನೋ ವಿಗ್ರಹದ ಪೀಠಕ್ಕೆ ಏರಿಸುವರು. ಅದು ಖುರಾನಿನ ಸುರವಾಗಬಹುದು, ಪ್ರಾಟೆಸ್ಟೆಂಟರ ಶಿಲುಬೆಯಾಗಬಹುದು, ಪಾರ್ಸಿಯರ ಬೆಂಕಿಯಾಗಬಹುದು. ಅಂತೂ

ಒಂದಲ್ಲ ಮತ್ತೊಂದು ಆ ಸ್ಥಳಗಳಲ್ಲಿರುವುದು. ಎಲ್ಲಿಯವರೆವಿಗೆ ಮಾನವನ ನಾಮರೂಪಗಳ ಬೇಲಿಯಲ್ಲಿ ಇರುವನೋ ಅಲ್ಲಿಯವರೆವಿಗೂ ದೇವರಿ ಗುಣ ಆಕಾರವನ್ನು ಕೊಡುವನು. ಆದರೆ ಇದು ದೇವರನ್ನು ಯಾವುದೊ ಒಂದು ಆಕಾರದಲ್ಲಿ ಬಂಧಿಸುವುದಕ್ಕೆ ಅಲ್ಲ. ಅದನ್ನು ಮೀರಿ ಹೋಗ ವುದಕ್ಕೆ.

ನಾವು ಅವನನ್ನು ಪೂಜೆಮಾಡುವಾಗಲೂ ಪಂಚೇಂದ್ರಿಯಗಳಿ ಸಂಬಂಧಿಸಿದ ರೂಪ ರಸ ಶಬ್ದ ಸ್ಪರ್ಶ ಗಂಧವನ್ನು ಉಪಯೋಗಿಸ ವೆವು. ಪೂಜೆಯ ಸಮಯದಲ್ಲಿ ಗಂಟಾನಾದ ಮಾಡುವೆವು. ಆರ ಎತ್ತುವೆವು, ಪರಿಮಳವನ್ನು ನಿವೇದಿಸುವೆವು, ಆಕಾಶದ ನೆನಪನ್ನು ತರುವ ಬಟ್ಟೆಯನ್ನು ಸಮರ್ಪಿಸುವೆವು. ಗಾಳಿಯ ನೆನಪನ್ನು ತರುವ ಚಾಮರವನ್ನು ಬೀಸುವೆವು, ಸ್ಪರ್ಶಕ್ಕೆ ಸಂಬಂಧಪಟ್ಟ ಹಲವಾರು ಸೇವ ಯನ್ನು ಮಾಡುವೆವು. ಇಂತಹ ಸ್ಥೂಲ ಹೊಟ್ಟಿನ ಒಳಗಡೆ ಸೂಕ್ಷ್ಮ ಭಾವ ಹುದುಗಿದೆ. ಭಾವವನ್ನು ಮುಂದೆ ಬರುವ ಜನರಿಗಾಗಿ ಇಡಬೆ ಕಾದರೆ, ಅದು ಬಾಹ್ಯಾಚಾರದ ಹೊಟ್ಟಿನ ಬಳಿಗೆ ಇಡಬೇಕು. ಇದಕ್ಕೆ ಶ್ರೀ ರಾಮಕೃಷ್ಣರು "ಭತ್ತವನ್ನು ತಿನ್ನುವಾಗ ಅಕ್ಕಿಮಾಡಿ ಹೊಟ್ಟನ್ನು ಆಚೆಗೆ ಎಸೆಯುತ್ತೇವೆ. ಆದರೆ ಅದನ್ನು ಬಿತ್ತುವಾಗ ಹೊಟ್ಟಿನಸಮೇ ಬಿತ್ತುತ್ತೇವೆ" ಎನ್ನುತ್ತಿದ್ದರು. ನಮಗೆ ಇಂದು ತೋರುವ ಹಲವಾರು ಆಚಾರದಲ್ಲಿ ಅರ್ಥ ತೋರದೆ ಇರಬಹುದು. ಆದರೆ ಅದರ ಅಂತರಾಳದಲ್ಲಿ ಅರ್ಥದ ಗುಪ್ತಗಾಮಿನಿ ಹರಿಯುತ್ತಿದೆ.

ಎಲ್ಲ ಜನರಿಗೂ ಒಂದಲ್ಲ ಒಂದು ಬೇಕಾಗಿದೆ. ಕೆಲವರಿಗೆ ತತ್ತ್ವ ಬೇಕು. ಕೆಲವರಿಗೆ ಕಥೆಗಳುಬೇಕು, ಕೆಲವರಿಗೆ ಪೂಜೆಬೇಕು, ಕೆಲವರಿಗೆ ಮೂರೂಬೇಕಾಗಿವೆ. ಯಾವುದನ್ನೂ ಹಳಿಯದೆ ಶ್ರೀ ರಾಮ ಕೃಷ್ಣರು ಇವುಗಳೆಲ್ಲವನ್ನೂ ಸ್ವೀಕರಿಸಿದರು.

ಶ್ರೀ ರಾಮಕೃಷ್ಣರು ಹೆಚ್ಚು ಭಕ್ತಿಗೆ ಪ್ರಾಶಸ್ತ್ಯ ಕೊಡುತ್ತಿದ್ದರು. ಆದರೆ ಅವರ ಭಕ್ತಿಯ ಹಿನ್ನೆಲೆಯಾಗಿ ಯಾವಾಗಲೂ ಜ್ಞಾನವಿರುತಿತ್ತು. ಸ್ವಾಮಿ ವಿವೇಕಾನಂದರೆ ಒಂದುವೇಳೆ ಶ್ರೀ ರಾಮಕೃಷ್ಣರು ನೋಟಕ್ಕೆ ಭಕ್ತರು, ಒಳಗೆ ಜ್ಞಾನಿಗಳೂ ಎನ್ನುತ್ತಿದ್ದರು. ಹೆಚ್ಚು ಮಾನವರು ಭಾವಜೀವಿಗಳು. ಯುಕ್ತಿ ಭಾವವನ್ನು ಆಶ್ರಯಿಸಿ ಬೆಳೆಯುವುದು. ಆದಕಾರಣವೇ ಶ್ರೀ ರಾಮಕೃಷ್ಣರು ಭಕ್ತಿಗೆ ಹೆಚ್ಚು ಮಾನ್ಯತೆ ಕೊಟ್ಟರು.

ಪರಮಹಂಸರು ಅಷ್ಟೇ ಪ್ರಾಧಾನ್ಯವನ್ನು ಕರ್ಮಯೋಗಕ್ಕೆ ಕೊಟ್ಟರು. ಒಂದುದಿನ ಭಕ್ತನೊಬ್ಬನು ಶ್ರೀ ರಾಮಕೃಷ್ಣರೊಂದಿಗೆ ಮಾತನಾಡುತ್ತಿದ್ದಾಗ ಅವನು ತಾನು ಬೇಕಾದಷ್ಟು ಪರರಿಗೆ ಉಪಕಾರ ಮಾಡಬೇಕೆಂದು ಹೇಳುತ್ತಿದ್ದನು. ಇದನ್ನು ಕೇಳಿ ಶ್ರೀ ರಾಮಕೃಷ್ಣರು ಉಪಕಾರದ ಮಾತನ್ನು ಆಡಬೇಡ, ದೇವರೊಬ್ಬನೆ ಇತರರಿಗೆ ಉಪಕಾರ ಮಾಡಬಲ್ಲ. ಸಾಧಾರಣ ಜೀವಿಗಳು ಇತರರಿಗೆ ಸೇವೆಮಾಡಬಲ್ಲರು. ಯಾರು ಬ್ರಹ್ಮಾಂಡವನ್ನು ಸೃಷ್ಟಿಸಿ, ಪಶುಪಕ್ಷಿ ಕ್ರಿಮಿಕೀಟಗಳಿಗೆ ಅಹಾರವನ್ನು ಒದಗಿಸಿರುವನೋ, ಅವನು, ಕೆಲವರಿಗೆ ಸಹಾಯಮಾಡಲಾಗದೆ ಅವರಿಗೆ ನೀವು ಸಹಾಯಮಾಡಿ ಎಂದು ಹೇಳಲಿಲ್ಲ. ಉಪಕಾರವಲ್ಲ ಸೇವೆ ಎಂದರು. ಇದನ್ನು ಸ್ವಾಮಿ ವಿವೇಕಾನಂದರು ಕೇಳಿದರು. ನಂತರ ಕೆಲವು ಸ್ನೇಹಿತರೊಂದಿಗೆ ಮಾತನಾಡುತ್ತಿದ್ದಾಗ, "ಇಂದು ಪರಮಹಂಸರ ಬಾಯಿನಿಂದ ದೊಡ್ಡಸತ್ಯವನ್ನು ಕೇಳಿದೆ. ಬದುಕಿದ್ದರೆ ಎಲ್ಲರಿಗೂ ಬೋಧಿಸುವೆನು" ಎಂದರು. ಅವರು ಬೋಧಿಸಿದ ಕರ್ಮಯೋಗವೆಲ್ಲಾ ಉಪಕಾರವಲ್ಲ ಸೇವೆ ಎಂಬ ಒಂದು ಸೂತ್ರದ ಭಾಷ್ಯ.

ಶ್ರೀ ರಾಮಕೃಷ್ಣರು ಎಲ್ಲಾ ಸಾಧನೆಯನ್ನೂ ಮಾಡಿ ಸಿದ್ಧಿ ಎಂಬ ಅಮೃತವನ್ನು ತಮ್ಮ ಹೃದಯದಲ್ಲಿ ಶೇಖರಿಸಿಟ್ಟುಕೊಂಡರು. ಆದರೆ ಅಮೃತವನ್ನು ತಾವು ಮಾತ್ರಸವಿದು ಧನ್ಯರಾಗ ಬಯಸಲಿಲ್ಲ. ಜಗದ ಕಷ್ಟನಷ್ಟಗಳಲ್ಲಿ ಸಿಕ್ಕಿ ನೊಂದವರಿಗೆಲ್ಲಾ ಇದನ್ನು ಹಂಚಿ ಅವರನ್ನೂ ಸುಖಿಗಳನ್ನಾಗಿ ಮಾಡಬಯಸಿದರು. ಆನಂದ ಯಾವಾಗಲೂ ಮತ್ತೊಬ್ಬನಿಗೆ ಹಂಚಿದಾಗ ಇಮ್ಮಡಿಸುವುದು. ಪರಮಹಂಸರು ಶಿಷ್ಯರಿಗೆ ಕಾದುಕುಳಿತರು.

ಪ್ರಪಂಚದಲ್ಲಿ ಗುರುಶಿಷ್ಯರನ್ನು ಯಾವುದೋ ಕಾಣದ ನಿಯಮ ಒಂದು ಬಂಧಿಸುವುದು. ಒಬ್ಬರಿಗೆ ಮತ್ತೊಬ್ಬರ ಪರಿಚಯವಿಲ್ಲದೇ ಇದ್ದರೂ ಒಬ್ಬರು ಮತ್ತೊಬ್ಬರಿಗೆ ಕಾತರರಾಗಿರುವರು. ಒಂದು ಸಿದ್ಧವಾದರೆ ಮತ್ತೊಂದು ಅದನ್ನು ಹುಡುಕಿಕೊಂಡು ಬಂದೇಬರುವುದು. ಹೂವು ಅರಳಿದರೆ ದುಂಬಿಗಳಿಗೆಲ್ಲಾ ಅದು ನಿಮಂತ್ರಣವನ್ನು ಕಳುಹಿಸುವುದಿಲ್ಲ. ಅದರ ಪರಿಮಳ ಮತ್ತು ಬಣ್ಣವೇ ದುಂಬಿಗಳನ್ನು ತನ್ನೆಡೆಗೆ ಸೆಳೆಯುವುದು. ಶ್ರೀ ರಾಮಕೃಷ್ಣರ ತಪೋಶಕ್ತಿ ಹಲವು ಪಕ್ಕಕ್ಕೆ ಬಂದ ಸಾಧಕರನ್ನು ತಮ್ಮೆಡೆಗೆ ಸೆಳೆಯಿತು.

ಶ್ರೀ ರಾಮಕೃಷ್ಣರು ಪ್ರತಿದಿನವೂ ಸಂಜೆ ತಮ್ಮ ಕೋಣೆಯ

ಮೇಲೆ ಹೋಗಿ ಕಲ್ಕತ್ತೆಯಕಡೆ ನೋಡುತ್ತ, "ಎಲ್ಲಿ ನನ್ನ ಮಕ್ಕಳು ಇನ್ನೂ ಬರಲಿಲ್ಲವಲ್ಲಾ" ಎಂದು ದುಃಖಿಸುತ್ತಿದ್ದರು. ಜಗನ್ಮಾತೆಯನ್ನು ಕಾಣಲು ಮೊದಲು ಎಷ್ಟು ತವಕಪಟ್ಟರೋ ಅಷ್ಟೇ ತವಕಪಟ್ಟರು ಶಿಷ್ಯರ ಆಗಮನಕ್ಕೆ. ಈ ಮಹಾ ಕರೆ ಅವ್ಯಕ್ತವಾದರೂ ಹಲವು ಜೀವಿಗಳಿಗೆ ಮುಟ್ಟಿ ಒಬ್ಬೊಬ್ಬರನ್ನಾಗಿ ತನ್ನ ಕಡೆಗೆ ಸೆಳೆಯಿತು.

ಶ್ರೀ ರಾಮಕೃಷ್ಣರು ಒಬ್ಬ ನುರಿತ ಗುರುಗಳು. ಜಗದ ರಹಸ್ಯವನ್ನು ಅರಿತವರು. ವೈವಿಧ್ಯತೆಯೇ ಸೃಷ್ಟಿ ನಿಯಮ. ಪ್ರತಿಯೊಂದು ವ್ಯಕ್ತಿಯಲ್ಲಿಯೂ ಒಂದು ವೈಶಿಷ್ಟ್ಯತೆ ಇದೆ. ಅದಕ್ಕೆ ಭಂಗಬರದಂತೆ ತರಪೇತನ್ನು ಕೊಡುತ್ತಿದ್ದರು. ನಿಜವಾದ ಗುರುವಿನ ಕೆಲಸ ಹಲವು ಬಗೆಯ ಹೂವಿನಗಿಡಗಳಿಂದ ತುಂಬಿರುವ ತೋಟಗಾರನ ಕೆಲಸದಂತೆ. ಪ್ರತಿಯೊಂದು ಗಿಡದಿಂದಲೂ ಒಂದೇ ಬಗೆಯ ಹೂವನ್ನು ನಿರೀಕ್ಷಿಸುವುದಿಲ್ಲ. ಬಗೆಬಗೆ ಹೂವಿನ ಗಿಡಗಳಿವೆ. ಪ್ರತಿಯೊಂದು ಹೂವಿನ ಗಿಡಕ್ಕೆ ನೀರು ಬೆಳಕು ಒಂದೇ ಆದರೂ, ಅಗತೆಮಾಡುವರೀತಿ ಹಾಕುವ ಗೊಬ್ಬರ ಮತ್ತು ಇನ್ನೂ ಇತರ ವಿಷಯಗಳಲ್ಲಿ ಎಷ್ಟೋ ವ್ಯತ್ಯಾಸವಿರುವುದು. ಕೊಡುವ ಬುದ್ಧಿವಾದದಲ್ಲಿ ಕೆಲವು ಸರ್ವರಿಗೂ ಸಾಮಾನ್ಯವಾಗಿರುವುವು ಇವೆ. ಜೊತೆಗೆ ಆಯಾ ವ್ಯಕ್ತಿಗೆ ಮಾತ್ರ ಅನ್ವಯಿಸುವುವೂ ಇವೆ. ಬಂದ ಶಿಷ್ಯರ ನ್ಯೂನಾತಿರೇಕಗಳನ್ನು ತಿದ್ದಿ, ಅವರೆಲ್ಲರನ್ನೂ ಭಗವಂತನ ಪೂಜೆಗೆ ಯೋಗ್ಯರಾದ ಪುಷ್ಪವನ್ನಾಗಿ ಮಾಡಿದರು.

ಶ್ರೀ ರಾಮಕೃಷ್ಣರಿಗೆ ಶಿಷ್ಯರ ಮೇಲೆ ಇದ್ದ ಪ್ರೀತಿ ಅಸಾಧಾರಣವಾದುದು. ತಾಯಿ ತಂದೆಯ ಪ್ರೀತಿಯನ್ನು ಕೂಡ ಮರೆಯಿಸುವಂತಹುದು ಇದು. ತಮ್ಮಲ್ಲಿರುವ ತಪಶ್ಯಕ್ತಿಯನ್ನು ಮತ್ತೊಬ್ಬರಿಗೆ ಕೊಡಬೇಕಾದರೆ ಪ್ರೀತಿ ಎಂಬ ಮಧ್ಯವರ್ತಿ ಆವಶ್ಯಕ. ನಿಜವಾದ ಗುರು ತನ್ನ ತಪಶ್ಯಕ್ತಿಯನ್ನೆಲ್ಲ ಶಿಷ್ಯನಿಗೆ ಕೊಟ್ಟು, ಅವನು ಉದ್ಧಾರವಾಗುವವರೆವಿಗೂ ತಮ್ಮ ಮುಕ್ತಿಯನ್ನು ಕೂಡ ಬದಿಗೆ ಇಡುವರು. ಮೊದಲು ಶಿಷ್ಯರ ಎದೆಗೆ ತಟ್ಟಿದ್ದು ಪರಮಹಂಸರಲ್ಲಿದ್ದ ಆಧ್ಯಾತ್ಮಿಕ ಸತ್ಯಗಳಲ್ಲ, ಅವರ ಅಪಾರ ಪ್ರೇಮ. ಆ ಪ್ರೇಮ ಮಹಾಸ್ತ್ರ ಎಲ್ಲರನ್ನೂ ಒಲಿಸಿಕೊಂಡಿತು. ಅವರಲ್ಲಿ ಪ್ರಖ್ಯಾತರಾದ ವಿವೇಕಾನಂದರಂತಹ ಹಲವಾರು ಶಿಷ್ಯರು ತಾವು ಪರಮಹಂಸರ ಪ್ರೇಮದ ದಾಸರೆಂದು ಹೇಳಿಕೊಳ್ಳುತ್ತಿದ್ದರು.

ವಿಮರ್ಶಾತ್ಮಕ ಬುದ್ಧಿ ಎಲ್ಲರಲ್ಲಿಯೂ ಬೆಳೆಯುವಂತೆ ಮಾಡುತ್ತಿದ್ದರು. ಯಾವುದನ್ನೂ ವಿಚಾರಮಾಡಿದಲ್ಲದೆ, ಪರೀಕ್ಷಿಸಿದಲ್ಲದೆ ಒಪ್ಪಿ

ಕೊಳ್ಳಬೇಡ ಎನ್ನುತ್ತಿದ್ದರು. ಅವರ ಬೋಧನೆ ಮತ್ತು ಜೀವನವನ್ನು ಶಿಷ್ಯರು ಹಲವರು ಹಲವು ರೀತಿಯಲ್ಲಿ ಪರೀಕ್ಷಿಸಿದರು. ಶಿಷ್ಯರು ತಮ್ಮನ್ನು ಪರೀಕ್ಷಿಸಿದರೆ ಕೋಪ ತಾಳದೆ ಆನಂದದಿಂದ ಅದನ್ನು ನೋಡುತ್ತಿದ್ದರು. ಕಾಮ ಕಾಂಚನ ತ್ಯಾಗ ಇವರ ಉಪದೇಶದ ಪಲ್ಲವಿಯಾಗಿತ್ತು. ಒಂದು ದಿನ, ಮುಂದೆ ಸ್ವಾಮಿ ವಿವೇಕಾನಂದರಾಗುವವರು, ಶ್ರೀ ರಾಮಕೃಷ್ಣರು ಹೊರಗೆ ಹೋದ ಸಮಯದಲ್ಲಿ ಒಂದು ನಾಣ್ಯವನ್ನು ಅವರ ಹಾಸಿಗೆಯ ಕೆಳಗೆ ಇಟ್ಟರು. ಶ್ರೀ ರಾಮಕೃಷ್ಣರು ಬಂದು ಹಾಸಿಗೆಯ ಮೇಲೆ ಕುಳಿತೊಡನೆಯೇ ಚೇಳು ಕುಟುಕಿದಂತೆ ಆಯಿತು. ಹಾಸಿಗೆಯನ್ನು ಹುಡುಕಿ ನೋಡಿದಾಗ ಒಂದು ರೂಪಾಯಿ ಬಿತ್ತು. ಪರಮಹಂಸರು ಯಾವುದನ್ನು ಬಿಟ್ಟಿದ್ದರೋ ಅದು ಅಷ್ಟು ಆಳಕ್ಕೆ ಹೋಗಿತ್ತು.

ಮತ್ತೊಬ್ಬ ಶಿಷ್ಯನು ಶ್ರೀ ರಾಮಕೃಷ್ಣರು ಅರ್ಧರಾತ್ರಿ ಎದ್ದು ಗಂಗಾನದಿಯ ತೀರಕ್ಕೆ ಹೋಗಿದ್ದಾಗ ಇವರು ಇಂತಹ ಅವೇಳೆ ಸಮಯದಲ್ಲಿ ಎದ್ದು ಎಲ್ಲಿಗೆ ಹೋಗುತ್ತಾರೆ, ಶಾರದಾದೇವಿಯವರ ಕೋಣೆ ಕಡೆ ಹೋಗಬಹುದೆ! ಎಂದು ಅಲ್ಲೇ ಹೊಂಚು ಕಾಯುತ್ತಿದ್ದರು. ಸ್ವಲ್ಪ ಹೊತ್ತಾದ ಮೇಲೆ ಶ್ರೀ ರಾಮಕೃಷ್ಣರು ಶಾರದಾದೇವಿಯವರ ಕೋಣೆಯ ಕಡೆ ಹೋಗದೆ ಸೀದಾ ತಮ್ಮ ರೂಮಿನ ಕಡೆ ಬಂದರು. ಹೊಂಚುಕಾಯುತ್ತಿದ್ದ ಶಿಷ್ಯ ಇವರನ್ನು ಅನುಮಾನಿಸಿದ್ದಕ್ಕಾಗಿ ನಾಚಿ ಪರಮಹಂಸರಿಗೆ ನಮಸ್ಕಾರಮಾಡಿ ಕ್ಷಮಾಪಣೆ ಕೇಳಿದನು. ಆಗ ಶ್ರೀ ರಾಮಕೃಷ್ಣರು ಸಾಧುವನ್ನು ಹಗಲು ಪರೀಕ್ಷೆ ಮಾಡಿದರೆ ಸಾಲದು, ರಾತ್ರಿಯೂ ಪರೀಕ್ಷಿಸಬೇಕು ಎಂದರು.

ಭಕ್ತಿಯ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ಮೂರ್ಖನಾದರೆ ಅದನ್ನು ಸಹಿಸುತ್ತಿರಲಿಲ್ಲ. ಯಾರೋ ಒಬ್ಬ ಶಿಷ್ಯನ ಕೈಯಲ್ಲಿ ಪೇಟೆಯಿಂದ ಒಂದು ಸಾಮಾನು ತರುವುದಕ್ಕೆ ಹೇಳಿದರು. ಆತನು ಸರಿಯಾಗಿ ಪರೀಕ್ಷೆಮಾಡದೆ ತಂದನು. ಅದಕ್ಕೆ ಶ್ರೀ ರಾಮಕೃಷ್ಣರು ಶಿಷ್ಯರು ವ್ಯಾಪಾರಕ್ಕೆ ಅಂಗಡಿಗೆ ಹೋದರೆ ಸರಿಯಾಗಿ ಪರೀಕ್ಷೆಮಾಡಬೇಕು. ಅಂಗಡಿಯಲ್ಲಿ ಧರ್ಮಕ್ಕಲ್ಲ ವರ್ತಕರು ಇರುವುದು ಎಂದು ಬುದ್ಧಿ ಹೇಳಿದರು. ಸಾಮಾನನ್ನು ಕೊಂಡಾದಮೇಲೆ ಕೊಸರು ಕೇಳುವುದನ್ನು ಮರೆಯಬೇಡಿ ಎಂದರು. ಅಸಡ್ಡೆ ಮರವು ಇವು ಯಾವ ರೂಪಿನಲ್ಲಿ ಬಂದರೂ ಸಹಿಸುತ್ತಿರಲಿಲ್ಲ. ನಾನು ಮತ್ತೊಂದು ಕ್ಷಣದಲ್ಲಿ ಪ್ರಪಂಚ ಮರೆತು ಸಮಾಧಿಯಲ್ಲಿ ಮಗ್ನನಾಗುತ್ತೇನೆ. ಆದರೆ ಯಾವುದನ್ನೂ ಮರೆಯು

ವುದಿಲ್ಲ. ನಿಮಗೇಕೆ ಇಂತಹ ಮರವು. ಇದು ಆಧ್ಯಾತ್ಮಿಕ ಜೀವನದ ಕುರುಹಲ್ಲವೆಂದರು.

ಒಬ್ಬ ಶಿಷ್ಯನು ತುಂಬಾ ಮೃದು ಸ್ವಭಾವದವನು. ಒಂದು ಗಟ್ಟಿ ಮಾತನ್ನಾಡಿದರೂ ಸಹಿಸುವುದಕ್ಕೆ ಆಗುತ್ತಿರಲಿಲ್ಲ. ಆತ ಕೆಲವರೊಡನೆ ಒಂದು ದಿನ ದೋಣಿಯಲ್ಲಿ ಬರುತ್ತಿದ್ದಾಗ ಕೆಲವರು ಶ್ರೀರಾಮಕೃಷ್ಣರನ್ನು ಹಾಸ್ಯಮಾಡುತ್ತಿದ್ದರು. ಈತ ಇದನ್ನು ಸುಮ್ಮನೆ ಕೇಳುತ್ತಿದ್ದನು. ದಕ್ಷಿಣೇಶ್ವರಕ್ಕೆ ಬಂದಮೇಲೆ ಈ ಸಮಾಚಾರವನ್ನು ಅವರಿಗೆ ಹೇಳಿದನು. ಶ್ರೀರಾಮಕೃಷ್ಣರು "ಏನು ಗುರುನಿಂದೆ ಮಾಡುತ್ತಿದ್ದರೂ ನೀನು ಸುಮ್ಮನೆ ಕೇಳುತ್ತಿದ್ದೆಯ? ಆ ಸ್ಥಳವನ್ನು ಬಿಟ್ಟಾದರೂ ಬರಬೇಕಾಗಿತ್ತು" ಎಂದರು.

ಮತ್ತೊಬ್ಬ ಶಿಷ್ಯನ ಸ್ವಭಾವ ಉಗ್ರ. ಆತನ ಜೀವನ ಮಾಗುವುದಕ್ಕೆ ಸ್ವಲ್ಪ ಮೃದುತನ ಬರಬೇಕಾಗಿತ್ತು. ಅಂತಹ ಶಿಷ್ಯನೊಬ್ಬನು ದೋಣಿಯಲ್ಲಿ ಬರುತ್ತಿದ್ದಾಗ ಹಿಂದಿನಂತೆಯೇ ಕೆಲವರು ಶ್ರೀರಾಮಕೃಷ್ಣರನ್ನು ದೂರುತ್ತಿದ್ದರು. ಇದನ್ನು ಕೇಳಿ ತುಂಬಾ ಕೋಪತಾಳಿ ದೋಣಿಯ ಒಂದು ಕಡೆಗೆ ಹೋಗಿ, ನೀವು ನನ್ನ ಗುರುನಿಂದೆಯನ್ನು ನಿಲ್ಲಿಸದೇ ಇದ್ದರೆ ದೋಣಿಯನ್ನು ಮುಳುಗಿಸುತ್ತೇನೆ ಎಂದು ದೋಣಿಯನ್ನು ಅಲ್ಲಾಡಿಸತೊಡಗಿದನು. ದೋಣಿಯಲ್ಲಿದ್ದವರು ಅಂಜಿ ಸುಮ್ಮನಾದರು. ಶ್ರೀರಾಮಕೃಷ್ಣರಿಗೆ ಈ ಸಮಾಚಾರವನ್ನು ಹೇಳಿದಮೇಲೆ, ಅವರು, "ಕೋಪದಿಂದ ಎಂತಹ ಅನಾಹುತಮಾಡುತ್ತಿದ್ದೆ. ಅವರು ಬೈದರೆ ನನಗೇನಾಯಿತು" ಎಂದರು.

ಶ್ರೀರಾಮಕೃಷ್ಣರು ಪ್ರತ್ರಿಯೊಬ್ಬರ ಶೀಲವನ್ನು ಪರೀಕ್ಷಿಸಿ ಅವರವರಿಗೆ ತಕ್ಕ ಸಲಹೆಯನ್ನು ಕೊಡುತ್ತಿದ್ದರು.

ಶ್ರೀರಾಮಕೃಷ್ಣರು ಪ್ರಪಂಚವನ್ನು ಬಿಟ್ಟ ಕೆಲವು ಸನ್ಯಾಸಿಗಳಿಗೆ ಮಾತ್ರ ಆದರ್ಶಪ್ರಾಯವಾಗಲು ಬಯಸಲಿಲ್ಲ. ಗೃಹಸ್ಥರಿಗೂ ಆದರ್ಶ ಪ್ರಾಯರಾಗಿದ್ದರು. ಜಗತ್ತಿನ ಆಧ್ಯಾತ್ಮಿಕ ಜೀವನದಲ್ಲಿ ಇಂತಹ ಒಂದು ಜೀವನ ಸಿಕ್ಕುವುದು ಅಪರೂಪ. ಕೆಲವರು ಮದುವೆಯಾಗದೆ ಕೊನೆಯವರೆವಿಗೂ ಇರುವರು. ಕೆಲವರು ಮದುವೆಯಾಗಿ ವೈರಾಗ್ಯದ ಸುಳಿಗಾಳಿಗೆ ಬಿದ್ದು ಹೆಂಡತಿ, ಮನೆ, ಮಕ್ಕಳು ಎಲ್ಲವನ್ನು ಬಿಟ್ಟು ಹೋದವರು ಇರುವರು. ಆದರೆ ಮೊದಲು ಮದುವೆಯಾಗಿ ವೈರಾಗ್ಯದ ಸುಳಿಗಾಳಿಯಲ್ಲಿ ಸಿಕ್ಕಿರುವಾಗಲೂ, ಭಗವಂತನ ಸಾಕ್ಷಾತ್ಕಾರವಾದ ಮೇಲೆಯೂ, ಶ್ರೀರಾಮಕೃಷ್ಣರು ಕೈಹಿಡಿದ ಸತಿಯನ್ನು ತೊರೆಯಲಿಲ್ಲ. ಗೃಹಸ್ಥನಾಗಿಯೂ

ಸನ್ಯಾಸಿಗೆ ಸರಿಸಮನಾದ ಜೀವನವನ್ನು ನಡೆಸಲು ಸಾಧ್ಯವೆಂಬುದನ್ನು ಪರಮಹಂಸರು ತೋರಿರುವರು.

ಶ್ರೀ ಶಾರದಾದೇವಿಗೆ ಹದಿನೆಂಟು ವರುಷವಾದಾಗ ಶ್ರೀ ರಾಮಕೃಷ್ಣರನ್ನು ನೋಡಲು ದಕ್ಷಿಣೇಶ್ವರಕ್ಕೆ ಬಂದರು. ಶ್ರೀ ರಾಮಕೃಷ್ಣರು ಆದರದಿಂದ ಅವರನ್ನು ಬರಮಾಡಿಕೊಂಡು ಉಪಚರಿಸಿದರು. ಅಷ್ಟು ಹೊತ್ತಿಗೆ ಮಥುರನಾಥನು ತೀರಿಹೋಗಿದ್ದನು. "ಆತನಿದ್ದರೆ ನಿನಗೆ ಇಲ್ಲಿ ಇಳಿದುಕೊಳ್ಳುವುದಕ್ಕೆ ಬೇಕಾದಷ್ಟು ಅನುಕೂಲವನ್ನು ಮಾಡಿ ಕೊಡುತ್ತಿದ್ದನು" ಎಂದರು. ಶಾಸ್ತ್ರೀಯವಾಗಿ ಶ್ರೀ ರಾಮಕೃಷ್ಣರು ಶ್ರೀ ಶಾರದಾದೇವಿಯನ್ನು ಮದುವೆಯಾಗಿದ್ದರು. ಆದಕಾರಣ ತಾವು ಯಾವುದನ್ನು ಮಾಡಬೇಕಾದರೂ ಅವರ ಒಪ್ಪಿಗೆ ಮತ್ತು ಸಹಾನುಭೂತಿ ಇಲ್ಲದೆ ಮಾಡಬಯಸಲಿಲ್ಲ. ಬಲಾತ್ಕಾರವಾಗಿ ಏನೊಂದನ್ನೂ ಅವರು ಶಾರದಾದೇವಿಯವರ ಮೇಲೆ ಹೇರಲಿಲ್ಲ. ಶ್ರೀ ರಾಮಕೃಷ್ಣರು ಶಾರದಾದೇವಿಯವರಿಗೆ "ನನಗೆ ಎಲ್ಲಾ ಸ್ತ್ರೀಯರೂ ಜಗನ್ಮಾತೆಯ ಪ್ರತಿಬಿಂಬದಂತೆ ಕಾಣುವರು. ನಾನು ನಿನ್ನಲ್ಲಿಯೂ ಅದನ್ನೇ ನೋಡುತ್ತೇನೆ. ಆದರೆ ನೀನು ಇಂದ್ರಿಯ ಪ್ರಪಂಚದಲ್ಲಿ ಇರಲು ಇಚ್ಛೆಪಟ್ಟರೆ ಅದಕ್ಕೆ ನಾನು ಸಿದ್ಧವಾಗಿರುವೆ. ನಿನಗೆ ಯಾವುದು ಬೇಕು ಕೇಳು?" ಎಂದರು. ಆದರೆ ಶ್ರೀ ಶಾರದಾದೇವಿಯವರು ಪರಮಹಂಸರಿಗೆ ತಕ್ಕ ಸತಿ. ತಾವೂ ಅವರಂತೆಯೇ ಆಗಲು ಬಯಸಿದರು. ಇದನ್ನು ಕೇಳಿ ಶ್ರೀ ರಾಮಕೃಷ್ಣರಿಗೆ ಅತ್ಯಾನಂದವಾಯಿತು. ಆ ಜನ್ಮ ಬ್ರಹ್ಮಚರ್ಯ ವ್ರತಧಾರಿಗಳಾಗಿ ಇಬ್ಬರೂ ಜಗನ್ಮಾತೆಯ ಕೆಲಸಕ್ಕೆ ಟೊಂಕಕಟ್ಟಿ ನಿಂತರು.

ಎಂದು ಶ್ರೀ ಶಾರದಾದೇವಿಯವರು ಪ್ರಾಪಂಚಿಕ ಸುಖವನ್ನು ತೊರೆದು ತಾವು ಅವರಂತೆಯೇ ಜಗನ್ಮಾತೆಯ ಭಕ್ತರಾಗಲು ಬಯಸಿದರೋ ಅಂದಿನಿಂದಲೆ, ಶ್ರೀ ರಾಮಕೃಷ್ಣರು ಸತಿಯ ಜೀವನದ ಜವಾಬ್ದಾರಿಯನ್ನೆಲ್ಲ ತೆಗೆದುಕೊಂಡರು. ಸಂಸಾರದಲ್ಲಿ ಹೇಗೆ ನಡೆದುಕೊಳ್ಳಬೇಕು, ಪೂಜೆ, ಜಪ, ತಪ, ಸಾಧನೆಗಳನ್ನು ಹೇಗೆ ಮಾಡಬೇಕು, ಎಂಬುದರಿಂದ ಹಿಡಿದು ನಿರ್ವಿಕಲ್ಪ ಸಮಾಧಿಯವರೆವಿಗೆ ಅವರನ್ನು ಕರೆದುಕೊಂಡು ಹೋದರು.

ಶಾರದಾದೇವಿಯವರ ಜೀವನದಲ್ಲಿ ಅವರ ಅಮರ್ತ್ಯ ಪ್ರೇಮ ಎಷ್ಟು ಮಧುರವಾಗಿತ್ತು ಎಂಬುದನ್ನು ಶಾರದಾ ದೇವಿಯವರ ಜೀವನದಲ್ಲಿ ಚಿತ್ರಿಸಿರುವೆವು. ಸಾಧಾರಣ ಜನರು ದೇಹ ಸಂಬಂಧವನ್ನು

ಮೀರಿಹೋದರೆ ಅಲ್ಲಿ ಆನಂದವೆಲ್ಲಿರಬಹುದೆಂದು ಶಂಕಿಸಬಹುದು. ಆದರೆ ನಿಜವಾದ ಆನಂದ ದೇಹವನ್ನು ಮೀರಿಹೋದಾಗ ಮಾತ್ರ ಸಾಧ್ಯ. ಯಾರು ದೇಹ ಬುದ್ಧಿಯಲ್ಲಿ ನರಳುತ್ತಿರುವರೋ ಅಲ್ಲಿ ಕಾಮಮಿಶ್ರಪ್ರೇಮ ಮಾತ್ರ ಸಿಕ್ಕುವುದು. ದೇಹ ಮೀರಿಹೋದಾಗ ಮಾತ್ರ ಶುದ್ಧ ಪ್ರೇಮ ಸಿಕ್ಕುವುದು.

ಶ್ರೀ ರಾಮಕೃಷ್ಣರ ಕೀರ್ತಿ ಹಬ್ಬುತ್ತಾ ಬಂದಿತು. ಕಲ್ಕತ್ತೆಯ ಅನೇಕ ಪ್ರಮುಖ ವ್ಯಕ್ತಿಗಳು ಇವರನ್ನು ನೋಡಲು ಬರುತ್ತಿದ್ದರು. ಕೆಲವು ವೇಳೆ ಶ್ರೀ ರಾಮಕೃಷ್ಣರೇ ಅವರನ್ನು ನೋಡಲು ಹೋಗುತ್ತಿದ್ದರು. ಕೇಶವಚಂದ್ರಸೇನ ಬ್ರಹ್ಮ ಸಮಾಜದ ಮುಂದಾಳು. ಪ್ರಖ್ಯಾತವಾಗ್ಮಿ. ಪರಮಹಂಸರ ಹತ್ತಿರದ ಭಕ್ತನಾದ. ಒಂದು ದಿನ ಶ್ರೀ ರಾಮಕೃಷ್ಣರೇ ಈಶ್ವರಚಂದ್ರ ವಿದ್ಯಾಸಾಗರನನ್ನು ನೋಡುವುದಕ್ಕೆ ಹೋದರು. ಘನ ವಿದ್ವಾಂಸನಾದ ಈಶ್ವರಚಂದ್ರ, ಪರಮಹಂಸರ ಬಾಯಿನಿಂದ ಬರುವ ಮಾತನ್ನು ಕೇಳಿ, ಶಾಸ್ತ್ರಗಳ ಜಟಿಲ ಸಮಸ್ಯೆಯನ್ನು ಕೂಡ ಇವರ ಮಾತು ಬಗೆಹರಿಸಬಲ್ಲದೆಂದು ತಿಳಿದನು. ಮಹರ್ಷಿ ದೇವೇಂದ್ರನಾಥ ಠಾಕೂರರನ್ನು ನೋಡಲು ಶ್ರೀ ರಾಮಕೃಷ್ಣರೆ ಒಂದು ದಿನ ಮಥುರಾನಾಥನೊಂದಿಗೆ ಹೋದರು. ದಯಾನಂದ ಸರಸ್ವತಿ ಶ್ರೀ ರಾಮಕೃಷ್ಣರನ್ನು ನೋಡುವುದಕ್ಕೆ ದಕ್ಷಿಣೇಶ್ವರಕ್ಕೆ ಬಂದಿದ್ದನು.

ಮುಂದೆ ಪ್ರಪಂಚವನ್ನೇ ವಿಸ್ಮಯಗೊಳಿಸಿದಂತ ಸ್ವಾಮಿ ವಿವೇಕಾನಂದ ಮುಂತಾದ ಶಿಷ್ಯರು ಆಗ ಅನಾಮಧೇಯರಾಗಿ ಬಂದು ಹೋಗುತ್ತಿದ್ದರು.

ಶ್ರೀ ರಾಮಕೃಷ್ಣರಿಗೆ ಬಂದ ಶಿಷ್ಯರೊಡನೆ ಮಾತನಾಡಿ, ಮಾತನಾಡಿ, ಗಂಟಲಿನಲ್ಲಿ ಹುಣ್ಣಾಯಿತು. ಮಾತನಾಡಬೇಡಿ ಎಂದು ವೈದ್ಯರು ಎಷ್ಟು ಹೇಳಿದರೂ ಕೇಳುತ್ತಿರಲಿಲ್ಲ. ಯಾರಾದರೂ ಬದ್ಧ ಜೀವಿಗಳು ಬಂದು ಇವರ ಹತ್ತಿರ ನಿಂತು ಭಗವಂತನ ವಿಷಯವನ್ನು ಎತ್ತಿದರೆ ಸಾಕು, ಯಾತನೆಯನ್ನು ಗಮನಕ್ಕೆ ತಾರದೆ ಮಾತನಾಡಲು ಮೊದಲು ಮಾಡುವರು. "ನನ್ನ ಮಾತಿನಿಂದ ಇತರರಿಗೆ ಶಾಂತಿ ಸಿಕ್ಕುವ ಹಾಗೆ ಇದ್ದರೆ, ಇಂತಹ ಎಷ್ಟು ನೋವನ್ನಾದರೂ ಸಹಿಸುತ್ತೇನೆ. ಭವ ಜೀವಿಗಳ ಉದ್ಧಾರಕ್ಕೆ ಎಷ್ಟು ಜನ್ಮಗಳಾದರೂ ಎತ್ತಲು ಸಿದ್ಧನಾಗಿರುವೆ" ಎನ್ನುತ್ತಿದ್ದರು.

ಶ್ರೀ ರಾಮಕೃಷ್ಣರೆಂಬ ದೇಹದ ಗೂಡಿನಲ್ಲಿ ವಾಸಿಸುತ್ತಿದ್ದ ಜೀವದ

ಹಕ್ಕಿ ೧೮೮೬ ನೇ ಇಸವಿ ಆಗಸ್ಟ್ ೧೬ ನೇ ತಾರೀಖು ಹಾರಿಹೋಯಿತು. ಅಂದಿನಿಂದ ವಿಶ್ವವಿಹಾರಿ ಆಯಿತು. ಅವರ ತಪಸ್ಸು ಸರ್ವತೋಮುಖ ವಾಗಿ ಬಹುಜನರ ಹಿತಕ್ಕೆ, ಬಹು ಬಹು ಜನರ ಸುಖಕ್ಕೆ, ಸಾರ್ಥಕ ವಾಯಿತು.

ಶ್ರೀ ರಾಮಕೃಷ್ಣರು ಸನಾತನ ಹಿಂದೂ ಧರ್ಮದ ಪೂರ್ಣ ಪ್ರತಿನಿಧಿ. ಯಾವುದನ್ನೂ ಅವರು ಅಲ್ಲಗಳೆಯಲಿಲ್ಲ. ಎಲ್ಲವನ್ನೂ ಪೂರ್ಣ ಮಾಡಿದರು. ಹಿಂದುವಾಗಿಯೇ ಇದ್ದು ಎಲ್ಲಾ ಧರ್ಮವನ್ನು ಸಾಧನೆ ಮಾಡಬಹುದೆಂಬುದನ್ನು ತೋರಿದರು. ಎಲ್ಲಾ ಧರ್ಮದ ಹಿಂದೆ ಇರುವುದೊಂದೇ ಸತ್ಯವೆಂಬುದು ಅವರ ಅನುಭವದ ಆಳದಿಂದ ಬಂದ ಮಾತು. ಹಿಂದುಗಳು, ಮಹಮ್ಮದೀಯರು, ಕ್ರೈಸ್ತರು, ಧರ್ಮದ ಹೆಸರಿನಲ್ಲಿ ವೈಮನಸ್ಯವನ್ನು ಹರಡುವ ಬದಲು, ಶ್ರೀ ರಾಮಕೃಷ್ಣರಂತಹ ಒಂದು ಆದರ್ಶವಿದ್ದರೆ, ಹಿಂದುಗಳು ಉತ್ತಮ ಹಿಂದುಗಳಾಗುವರು, ಕ್ರೈಸ್ತರು ಉತ್ತಮ ಕ್ರೈಸ್ತರಾಗುವರು.

ನಾವು ಇಂದು ವೈಜ್ಞಾನಿಕ ಯುಗದಲ್ಲಿ ಇರುವೆವು. ಪ್ರತಿ ವರ್ಷವು ಕಣ್ಣನ್ನು ಕೋರೈಸುವ ಹೊಸ ಹೊಸ ನಿಯಮಗಳನ್ನು ವೈಜ್ಞಾನಿಕರು ಪ್ರಕೃತಿಯ ಭಂಡಾರದಿಂದ ಹೊರಗೆ ತೆಗೆಯುತ್ತಿರುವರು. ಅಲ್ಲಾವುದ್ದೀನನ ಕೈಯಲ್ಲಿದ್ದ ಮಾಯಾ ದೀಪದಂತೆ ಆಗಿದೆ ಇಂದು ವಿಜ್ಞಾನ ಮಾನವನ ಕೈಯಲ್ಲಿ. ಆ ದೀಪವನ್ನು ಉಜ್ಜಿದ ತಕ್ಷಣವೇ ಒಬ್ಬ ರಾಕ್ಷಸ ಬಂದು ಯಾವ ಕೆಲಸವನ್ನು ಹೇಳಿದರೆ ಅದನ್ನು ಕಣ್ಣು ಮಿಟುಕಿಸುವುದರೊಳಗೆ ಮಾಡಿಟ್ಟು ಹೋಗುವನು. ಪ್ರಪಂಚದಲ್ಲಿ ಕೋಟ್ಯಂತರ ನಕ್ಷತ್ರಗಳಿವೆ. ಅದರಲ್ಲಿ ಒಂದು ಮಧ್ಯಮ ತರಗತಿಗೆ ಸೇರಿದ ನಕ್ಷತ್ರ ನಮ್ಮ ಸೂರ್ಯ. ಆತನ ಸುತ್ತಲೂ ಪ್ರದಕ್ಷಿಣೆ ಮಾಡುತ್ತಿರುವ ಗ್ರಹಗಳಲ್ಲಿ ಮಧ್ಯಮ ತರಗತಿಗೆ ಸೇರಿದ ಗ್ರಹ ನಮ್ಮ ಭೂಮಿ. ಅದರಲ್ಲಿ ಆಕಾರ ಗಾತ್ರದಲ್ಲಿ ಕ್ಷುದ್ರತಮನಾಗಿರುವನು ಮಾನವ. ಆದರೆ ಈ ಸಣ್ಣ ಮನುಷ್ಯ ಮಾಡುವ ಕಾರ್ಯಗಳಿಗೆ ದೇವರೆ ಆಶ್ಚರ್ಯ ಪಡುವನೇನೋ!

ತಾರೆ ನಿಹಾರಿಕೆಗಳನ್ನು ಅಳೆಯುವನು, ತೂಗುವನು, ಅವುಗಳ ಅಂತರ್ಯದಲ್ಲಿ ಏನಿದೆ ಎಂದು ಪರೀಕ್ಷಿಸುವನು. ಎಷ್ಟು ಕೋಟಿ ವರುಷದ ಹಿಂದೆ ಇದು ಹುಟ್ಟಿತು; ಮತ್ತೆಷ್ಟು ಕೋಟಿ ವರುಷ ಇದು ಬದುಕಬಲ್ಲದೆಂದು ಎಲ್ಲೋ ಕೆಲವು ವರ್ಷ ಬಾಳಿ, ಅಳಿದು ಹೋಗುವ

ಮನುಷ್ಯ ಅವುಗಳ ಜಾತಕವನ್ನು ಬರೆಯುವನು.

ಕ್ಷಣಾರ್ಧದಲ್ಲಿ ಸುದ್ಧಿಯನ್ನು ಪ್ರಪಂಚದ ಸುತ್ತಲೂ ಕಳುಹಿಸುವನು; ದೂರದಲ್ಲಿ ಏನಾಗುತ್ತಿದೆ ಎಂಬುದನ್ನು ತನ್ನ ಕೋಣೆಯಲ್ಲಿ ವಿರಾಮವಾಗಿ ಕುಳಿತು ಕೇಳುವನು ನೋಡುವನು. ಮೃಗಕ್ಕಿಂತ ವೇಗವಾಗಿ ತಿರೆಯಮೇಲೆ ಓಡುವನು. ಹಕ್ಕಿಯಂತೆ ಆಕಾಶದಲ್ಲಿ ಹಾರುವನು, ಮೀನಿನಂತೆ ನೀರಿನಲ್ಲಿ ಮುಳುಗುವನು. ಕಣ್ಣಿಗೆ ಕಾಣದ ಸಣ್ಣ ಕಣ ಒಂದರಲ್ಲಿ, ಒಂದು ಹೊಸ ಪ್ರಪಂಚವನ್ನು ಹೊರಗೆಡಹುವನು. ಗಾತ್ರದಲ್ಲಿ ತೂಕದಲ್ಲಿ ಭೂಮಿಗಿಂತ ಕೋಟ್ಯಂತರ ಪಾಲು ವಿಸ್ತಾರವಾಗಿರುವ ವಿರಾಟ್ ವಿಶ್ವವವನ್ನು ತನ್ನ ಕಲ್ಪನಾ ಬಾಹುವಿನಿಂದ ಸೆಳೆದು ಸಣ್ಣ ಕಣದಂತೆ ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸಬಲ್ಲನು.

ಜ್ವಾಲಾಮುಖಿ, ಭೂಕಂಪಗಳನ್ನು ಮೀರುವ ಧ್ವಂಸ ಕಾರ್ಯವನ್ನು ಮನುಷ್ಯನು ಮಾಡಬಲ್ಲನು. ಕರ್ಣಾರ್ಜುನರ ಮಂತ್ರಾಸ್ತ್ರಗಳನ್ನು ಮೀರಿಸುವ ಶಸ್ತ್ರಾಸ್ತ್ರಗಳನ್ನು ನಿರ್ಮಿಸಬಲ್ಲನು.

ಇದನ್ನೆಲ್ಲಾ ನೋಡಿದರೆ ರೋಮಾಂಚನವೇನೊ ಆಗುವುದು. ಜನರ ಕಣ್ ಮನವನ್ನು ಮುಗ್ಧಗೊಳಿಸುವುದು. ಬಾಹ್ಯ ಸುಖಸಂಪತ್ತನ್ನು ಹೆಚ್ಚಿಸಿರುವುದು. ಆದರೆ ಜಗತ್ತಿಗೆ ಇದರಿಂದ ಶಾಂತಿ ಎಷ್ಟು ಲಭಿಸಿದೆ? ಪರಸ್ಪರ ಸೌಹಾರ್ದ ಎಷ್ಟು ಉಂಟಾಗಿದೆ? ಮಾನವ ಮೃಗಕ್ಕಿಂತ ಎಷ್ಟು ಮೇಲಕ್ಕೆ ನೈತಿಕ ಮಟ್ಟದಲ್ಲಿ ಏರಿರುವನು? ಈ ಪ್ರಶ್ನೆಗಳನ್ನು ಹಾಕಿದಾಗ ನಾವು ನಾಚಬೇಕಾಗುವುದು. ಹಿಂದೆ ಜನರು ಕೋಲು ಕಲ್ಲುಗಳಿಂದ ಕಾಯುತ್ತಿದ್ದರು ಇಂದು ಬಾಂಬು ಬುಲೆಟ್ಟುಗಳಿಂದ ಕಾಯುವರು. ನಮ್ಮ ನಾಗರಿಕತೆ ಹೊರಗೆ ಮೆರಗು ಕೊಡುವುದಾಗಿದೆಯೆ ಹೊರತು, ಮಾನವ ಜೀವನದ ಅಂತರಾಳವನ್ನು ಪ್ರವೇಶಿಸಿಲ್ಲ.

ಈ ಬಾಹ್ಯ ಜಗತ್ತನ್ನು ಮೀರಿದ ಮತ್ತೊಂದು ಜಗತ್ತಿದೆ. ಅದೇ ಮನುಷ್ಯನ ಆಂತರಿಕ ಜಗತ್ತು. ಕಾಮ ಕ್ರೋಧಗಳೆಂಬ ಮಹಾಜ್ವಾಲೆ ಅಲ್ಲಿ ಉರಿಯುತ್ತಿದೆ. ಯಾರು ಅದನ್ನು ಮೀರಿ ಹೋಗಿರುವರೊ, ಭಗವಂತನಲ್ಲಿ ಐಕ್ಯರಾಗಿರುವರೊ, ಅವರಿಂದ ಮಾತ್ರ ಜಗತ್ತಿಗೆ ಕಲ್ಯಾಣವಾಗಿರುವ ಮಾತು ಬಂದಿವೆ. ಅವರಿಂದ ಮಾತ್ರ ಶಾಂತಿ ಸೌಹಾರ್ದ ನೆಲಸುವುದಕ್ಕೆ ಸಾಧ್ಯ. ಅವರ ಕಣ್ಣೆದುರಿಗೆ ಜಾತಿ, ಕುಲ, ಗೋತ್ರ, ದೇಶಗಳ ಭಿನ್ನತೆ ಮಾಯವಾಗಿವೆ. ಎಲ್ಲರೂ ಅವರ ಕಣ್ಣಿಗೆ ಮಾತ್ರ, ಭಗವಂತನ ಮಕ್ಕಳಂತೆ ಕಾಣುವರು. ಅವರೆದೆ ಮಾತ್ರ

ಸರ್ವರಿಗೂ ಮಿಡಿಯುವುದು. ಇಂತಹ ಮಹಾ ವಿಭೂತಿ ವ್ಯಕ್ತಿ ಶ್ರೀ ರಾಮಕೃಷ್ಣ. ಅವರು ಒಂದು ವ್ಯಕ್ತಿ ಮಾತ್ರವಲ್ಲ. ಅನಂತ ಶಕ್ತಿಯ ಗಣಿ. ಅವರು ಮಾತ್ರ ಭವಸಾಗರವನ್ನು ದಾಟಲಿಲ್ಲ. ಮುಂದೆ ಬರುವ ಜನಾಂಗ ದಾಟುವುದಕ್ಕೆ ಒಂದು ನಾವೆಯಂತೆ ನಿಂತಿದೆ ಅವರ ಜೀವನ ಮತ್ತು ಸಂದೇಶ. ಇಂತಹ ಪುಣ್ಯಾತ್ಮನಿಗೆ ಜನನವಿತ್ತ ಕುಲ ಪವಿತ್ರ, ಹೆತ್ತತಾಯಿ ಧನ್ಯಳು, ಅವರ ಪಾದ ಧೂಳಿ ಸೋಕಿದ ನೆಲ ಪುಣ್ಯಭೂಮಿ.

ಕೆಲವು ಸಂದೇಶ :—

ನೀವು ರಾತ್ರಿ ಆಕಾಶದಲ್ಲಿ ಹಲವು ನಕ್ಷತ್ರಗಳನ್ನು ನೋಡುತ್ತೀರಿ
ಸೂರ್ಯೋದಯವಾದೊಡನೆ ಅವು ಕಾಣುವುದಿಲ್ಲ. ಆದರೆ ಹಗಲ
ನಕ್ಷತ್ರವಿಲ್ಲವೆಂದು ಹೇಳುವಿರೇನು? ಅದರಂತೆಯೇ ನೀವು ಅಜ್ಞಾನದಲ್ಲಿ
ರುವಾಗ ದೇವರು ಕಾಣದೆ ಹೋದರೆ ದೇವರೇ ಇಲ್ಲವೆನ್ನಬೇಡಿ.

ದೇವರು ನಿರ್ಾಕಾರನೂ ಹೌದು, ಸಾಕಾರನೂ ಹೌದು. ಅವನ
ಸಾಕಾರ ನಿರಾಕಾರವನ್ನು ಮೀರಿಯೂ ಇರುವನು. ಅವನು ಇನ್ನೂ
ಏನೇನೂ ಆಗಿರುವನೊ ಅದನ್ನು ದೇವರೇ ಬಲ್ಲ.

ಸಾಕಾರದೇವರು ಕಣ್ಣಿಗೆ ಕಾಣುವನು. ಒಬ್ಬನು ತನ್ನ ಪ್ರಿಯ
ಸ್ನೇಹಿತನನ್ನು ಮುಟ್ಟುವಂತೆ ಸ್ಪರ್ಶಮಾಡಲೂಬಹುದು.

ಎಲ್ಲಿಯವರೆವಿಗೂ ಗಂಟೆಯ ಶಬ್ದ ಕೇಳುವುದೊ ಅಲ್ಲಿಯವರೆವಿ
ಶಬ್ದ ಆಕಾರದ ವಲಯದೊಳಗೆ ಇರುವುದು. ಆದರೆ ಎಂದು ಅದನ್ನು
ನಾವು ಕೇಳಲಾರೆವೊ ಆಗ ಅದು ಅವ್ಯಕ್ತವಾಗುವುದು. ಅದರಂತೆಯೇ
ದೇವರಿಗೆ ಸಾಕಾರ ನಿರಾಕಾರಗಳೆರಡೂ ಇರುವುದು.

ಪಹರೆಯವನು ರಾತ್ರಿ ತನ್ನ ಕೈಯಲ್ಲಿರುವ ದೀಪದ ಮೂಲಕ
ಯಾರನ್ನೂ ಬೇಕಾದರೂ ನೋಡಬಹುದು. ಆದರೆ ತಾನೇ ದೀಪವನ್ನು
ತನ್ನ ಮುಖದ ಕಡೆಗೆ ತಿರುಗಿಸಿಕೊಳ್ಳುವವರೆವಿಗೆ ಯಾರೂ ಅವನ ಮುಖ
ವನ್ನು ನೋಡಲಾರರು. ಅದರಂತೆಯೇ ದೇವರು ಎಲ್ಲರನ್ನೂ ನೋಡು
ತ್ತಿರುವನು. ದೇವರೇ ದಯತೋರಿ, ನಮಗೆ ದರ್ಶನ ಕೊಡುವವರೆವಿ
ಯಾರೂ ಅವನನ್ನು ನೋಡಲಾರರು.

ಸೂರ್ಯ ಪ್ರಪಂಚವನ್ನು ಬೆಳಗುವನು. ಆದರೆ ಸಣ್ಣದೊಂದು
ಮೋಡ ನಮಗೆ ಸೂರ್ಯನನ್ನು ಕಾಣದಂತೆ ಮಾಡುವುದು. ಇದ
ರಂತೆಯೇ ಕೆಲಸಕ್ಕೆ ಬಾರದ ಸಣ್ಣದೊಂದು ಮಾಯಾತೆರೆ, ಸರ್ವ ವ್ಯಾಪಿ
ಯಾದ, ಸಾಕ್ಷಿಭೂತನಾದ, ಸಚ್ಚಿದಾನಂದ ಸ್ವರೂಪನನ್ನು ನಮಗೆ ಕಾಣ
ದಂತೆ ಮಾಡುವುದು.

ನನ್ನ ಕೈಯಲ್ಲಿರುವ ಬಟ್ಟೆಯನ್ನು ನನ್ನ ಮುಂದೆ ಹಿಡಿದುಕೊಂಡರೆ
ನಾನು ನಿಮಗೆ ಎಷ್ಟು ಹತ್ತಿರವಿದ್ದರೂ ಹೇಗೆ ಕಾಣುವುದಿಲ್ಲವೊ
ಇದರಂತೆಯೇ ದೇವರು ಎಲ್ಲರಿಗಿಂತಲೂ ಹತ್ತಿರದಲ್ಲಿದ್ದರೂ ಮಧ್ಯ
ಅಹಂಕಾರವೆಂಬ ತೆರೆ ಇರುವುದರಿಂದ ನೀವು ಅವನನ್ನು ನೋಡಲಾರಿರಿ.

ನಾನು ಯಾವಾಗ ಮುಕ್ತನಾಗುವೆ? "ನಾನು" ಎಂಬುದ

ನ್ಮಾಯುವಾದಾಗ. ನಾನು ನನ್ನದು ಅಜ್ಞಾನ. ನೀನು ನಿನ್ನದು ಜ್ಞಾನ.

ಎಲ್ಲಾ ಭಗವದಿಚ್ಛೆಯಿಂದ ಆಗುವುದೆಂಬ ದೃಢನಂಬಿಕೆ ಬಂದರೆ ಒಬ್ಬನು ದೇವರ ಕೈಯ್ಯಲ್ಲಿ ಯಂತ್ರವಾಗುವನು. ಆಗ ಅವನು ಬದುಕಿರುವಾಗಲೆ ಮುಕ್ತ.

'ನಾನು' ಎಂಬುದನ್ನು ನೀವು ನಾಶಮಾಡಲು ಆಗದೆ ಇದ್ದರೆ 'ನಾನು' ಸೇವಕ ಎಂಬ ಭಾವವಿರಲಿ. ನಾನು ದೇವರ ಸೇವಕ ಭಕ್ತನೆಂದು ತಿಳಿದರೆ ಅಷ್ಟು ಅಪಾಯವಿಲ್ಲ.

ನೀನು ಒಳ್ಳೆಯವನಾಗಬೇಕು, ಪರಿಶುದ್ಧನಾಗಬೇಕು ಎಂದು ಪರಿತಪಿಸುತ್ತಿದ್ದರೆ ದೇವರು ಒಬ್ಬ ಸದ್ಗುರುವನ್ನು ಕಳುಹಿಸುವನು. ನಮಗೆ ಅತ್ಯಾವಶ್ಯಕವಾಗಿ ಬೇಕಾಗಿರುವುದು ಅಂತಹ ಶ್ರದ್ಧೆ.

ಮಾನವನ ಗುರಿ ಭಗವಂತನ ಸಾಕ್ಷಾತ್ಕಾರಕ್ಕೆಂದು ತಿಳಿದುಕೊಳ್ಳುವವರು ಅತಿವಿರಳ.

ಪ್ರಾಪಂಚಿಕರು ಎಷ್ಟು ವ್ಯಥೆಪಟ್ಟರೂ, ಕಷ್ಟ ಅನುಭವಿಸಿದರೂ, ಜಾಗ್ರತರಾಗುವುದೇ ಇಲ್ಲ. ಒಂಟೆಗೆ ಮುಳ್ಳಿನ ಗಿಡ ಇಷ್ಟ. ಅದನ್ನು ತಿಂದಷ್ಟೂ ಬಾಯಿನಲ್ಲಿ ರಕ್ತ ಸೋರುವುದು. ಆದರೂ ಅದನ್ನು ತಿನ್ನುವುದು ಬಿಡುವುದಿಲ್ಲ.

ಹೇಗೆ ಕಂಬವನ್ನು ಹಿಡಿದುಕೊಂಡು ಬಹಳವೇಗವಾಗಿ ಸುತ್ತುತ್ತಿರುವ ಹುಡುಗ ಬೀಳುವುದಿಲ್ಲವೋ, ಹಾಗೆಯೇ ದೇವರನ್ನು ಹಿಡಿದುಕೊಂಡು ಪ್ರಪಂಚದ ಕೆಲಸ ಮಾಡಿ. ಆಗ ಅಪಾಯದಿಂದ ಪಾರಾಗುವಿರಿ.

ನೀವು ಪ್ರಪಂಚದಲ್ಲಿರುವಾಗ ಏನು ಮಾಡಬೇಕು? ನೀವು ಆತನಿಗಾಗಿ ಎಲ್ಲವನ್ನೂ ಕೊಡಿ. ಅವನಲ್ಲಿ ಶರಣಾಗಿ. ನಿಮಗೆ ಮತ್ತಾವ ತೊಂದರೆಯೂ ಇರುವುದಿಲ್ಲ. ಆಗ ಎಲ್ಲಾ ಅವನಿಚ್ಛಾಪ್ರಕಾರ ಆಗುವುದು ಗೊತ್ತಾಗುವುದು.

ಸಮಾಜದಲ್ಲಿರುವವರು, ಗೃಹಸ್ಥರಂತೆ ಆತ್ಮರಕ್ಷಣೆಗಾಗಿ ಪಾಪವನ್ನು ತಡೆಯುವಂತೆ ನಟಿಸಬೇಕು. ಆದರೆ ಪ್ರತೀಕಾರವನ್ನು ಎಂದಿಗೂ ಮಾಡಬೇಡಿ.

ಹೇಗೆ ಒಲೆಯ ಮೇಲಿಟ್ಟ ಹಸಿಯ ಸೌದೆ ಕ್ರಮೇಣ ಒಣಗಿ ಹೋಗುವುದೊ ಹಾಗೆಯೆ ಯಾರು ದೇವರಲ್ಲಿ ಶರಣಾಗತರಾಗಿ, ಅವನ ಮಂಗಳ ನಾಮವನ್ನು ಸ್ಮರಿಸುವರೊ, ಅವರ ಪಾಪ ಬತ್ತಿ ಹೋಗುವುದು. ಯಾರು ಪ್ರಾಪಂಚಿಕ ವಸ್ತುಗಳ ಮೇಲೆ ತಮಗೆ ಇರುವ ಆಸಕ್ತಿ

ನಿಂತಮೇಲೆ ದೇವರನ್ನು ಕುರಿತು ಯೋಚಿಸುತ್ತೇವೆ ಎಂದು ತಿಳಿ
ಕೊಂಡಿರುವರೊ, ಅವರು ಹಾಗೆ ಮಾಡುವುದಕ್ಕೆ ಆಗುವುದೇ ಇಲ
ಅಂತಹಕಾಲ ಪ್ರಾಪ್ತವಾಗುವುದಿಲ್ಲ.

ಮನುಷ್ಯ ಜನ್ಮದಲ್ಲಿ ಹುಟ್ಟುವಂತಹ ಅಪೂರ್ವ ಪುಣ್ಯ ಪ
ದಿದ್ದರೂ, ಯಾರು ದೇವರನ್ನು ಪಡೆಯುವುದಕ್ಕೆ ಪ್ರಯತ್ನಿಸುವುದಿಲ್ಲವೊ
ಅವನ ಬಾಳು ವ್ಯರ್ಥ.

ದೇವರು ಎಲ್ಲರಲ್ಲಿಯೂ ಇರುವನು. ಆದರೆ ದೇವರಲ್ಲಿ ಎಲ್ಲರ
ಇಲ್ಲ. ಅದಕ್ಕೇ ಮಾನವನು ತೊಂದರೆಗೆ ಒಳಗಾಗುವುದು.

ಹಾಲಿನಲ್ಲಿ ಬೆಣ್ಣೆ ಇದೆ ಎಂದು ಸುಮ್ಮನೆ ಕಿರಿಚಿಕೊಂಡರೆ ಬೆ
ಸಿಕ್ಕುವುದಿಲ್ಲ. ನಿಮಗೆ ಬೆಣ್ಣೆ ಬೇಕಾದರೆ ಹಾಲನ್ನು ಮೊಸರು ಮಾ
ಕಡಿಯಬೇಕು. ಆಗ ಮಾತ್ರ ಬೆಣ್ಣೆ ಸಿಕ್ಕುವುದು. ಅದರಂತೆಯೆ
ದೇವರನ್ನು ನೋಡಬೇಕೆಂಬ ಇಚ್ಛೆ ಇದ್ದರೆ ಸಾಧನೆ ಮಾಡಿ.

ನಾನು ನಿಜವಾಗಿ ಹೇಳುತ್ತೇನೆ ಕೇಳಿ. ಯಾರಿಗೆ ದೇವ
ಬೇಕೊ ಅವರಿಗೆ ಅವನು ಸಿಕ್ಕುವನು. ಇದನ್ನು ನಿಮ್ಮ ಜೀವನದಲ್ಲಿ
ಪರೀಕ್ಷೆಮಾಡಿ ನೋಡಿ. ಮೂರುದಿನ ಪ್ರಯತ್ನಪಡಿ. ಜಯಶೀ
ರಾಗುವುದರಲ್ಲಿ ಸಂದೇಹವಿಲ್ಲ.

ಪ್ರಾಪಂಚಿಕನಿಗೆ, ಭೋಗವಸ್ತುಗಳ ಮೇಲೆ ಇರುವ ಆಸಕ್ತಿ
ಯಷ್ಟು ತೀವ್ರವಾಗಿ, ನೀವು, ದೇವರನ್ನು ಪ್ರೀತಿಸಿದರೆ ನಿಮಗೆ ಅವನ
ದೊರಕುವನು.

ಹಲವು ಶತಮಾನದಿಂದ ಕೋಣೆಯೊಳಗೆ ಹುದುಗಿದ ಕತ್ತ
ಒಂದು ದೀಪ ಬಂದೊಡನೆಯೆ ಮಾಯವಾಗುವುದು. ಹಾಗೆಯೆ
ಭಗವಂತನ ಕೃಪಾದೃಷ್ಟಿಯೊಂದು ಹಲವು ಜನ್ಮಗಳಿಂದ ಶೇಖರಿಸಿ
ಅಜ್ಞಾನ ಮತ್ತು ದೋಷವನ್ನು ಓಡಿಸುವುದು.

ನಿಮಗೆ ಸೂಕ್ತತೋರಿದ ರೀತಿಯಲ್ಲಿ ಅವನನ್ನು ಪ್ರಾರ್ಥಿಸಿ
ಭಗವಂತ ನಿಜವಾಗಿ ಅದನ್ನು ಕೇಳುವನು. ಅವನು ಇರುವೆ ಕಾಲಿ
ಸಪ್ಪಳವನ್ನು ಕೂಡ ಆಲಿಸಬಲ್ಲ.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

ಕೊಲಂಬೊ ಇಂದ ಆಲ್ಮೋರಕೆ	೫	೦	೦
ಸಂವಾದ ತರಂಗಿಣಿ	೫	೦	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮	೦
ಸ್ವಾಮಿ ವಿವೇಕಾನಂದ (ಕುವೆಂಪು)	೩	೮	೦
ಪತ್ರಮಾಲೆ	೩	೦	೦
ಜ್ಞಾನಯೋಗ	೩	೦	೦
ರಾಜಯೋಗ	೨	೧೦	೦
ಶ್ರೀ ಶಾರದಾದೇವಿ ಸಂಭಾಷಣೆ	೨	೮	೦
ಗೀತಾ ಪತ್ರಗಳು	೨	೮	೦
ಶ್ರೀ ಶಾರದಾದೇವಿ	೨	೦	೦
ಪರಮಾರ್ಥ ಪ್ರಸಂಗ	೨	೦	೦
ಕರ್ಮಯೋಗ	೧	೮	೦
ಬ್ರಹ್ಮಾನಂದ ವಚನ ಸುಧೆ	೧	೪	೦
ಶ್ರೀ ರಾಮಕೃಷ್ಣ ಉಪನಿಷತ್	೧	೪	೦
ಪರಿವ್ರಾಜಕ	೧	೪	೦
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪	೦
ಭಕ್ತಿಯೋಗ	೧	೦	೦
ತ್ರಿವೇಣೀ (ಶ್ರೀ ರಾಮಕೃಷ್ಣ, ಸ್ವಾಮಿ ವಿವೇಕಾನಂದ, ಶಾರದಾದೇವಿ ಸಂಕ್ಷಿಪ್ತ ಜೀವನ)	೧	೦	೦
ಶ್ರೀ ಗುರುದೇವರ ವಚನ	೧	೦	೦
ಧನ್ಯತೆಗೆ ದಾರಿ	೧	೦	೦
ಅಮರನಾಥ ಯಾತ್ರೆ	೧	೦	೦
ಅನುಷ್ಠಾನ ವೇದಾಂತ	೧	೦	೦
ಶ್ರೀ ರಾಮಕೃಷ್ಣ	೦	೧೨	೦
ವಿದ್ಯಾಭ್ಯಾಸ	೦	೧೦	೦

ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ವೇದಾಂತ	೦	೧೦
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ದೇವದೂತ ಕ್ರಿಸ್ತ	೦	೪
ಪವಹಾರಿಬಾಬ	೦	೪
ದಿವ್ಯವಾಣಿ	೧	೦
ನಾಗಮಹಾಶಯ	೦	೧೨
ಶ್ರೀರಾಮಕೃಷ್ಣ ಲೀಲಾಪ್ರಸಂಗ	೧	೮
Drig Drishya Viveka	2	0
Mandukya Upanishad with Gaudapada Karika & Shankara's commentary	8	0

3. For correct answer and correct way, full marks to be given and noted in the margin. There is no need to give marks step by in such cases.

4. If a correct answer is arrived at by manipulation (ie.) wi knowing the way, marks need not be given.

5. Page-war total to be noted at the right hand bottom corner the body of the script with a circle.

6. On the cover page, the questions to be noted as

	Marks
I	
II	
III	
IV	
V to X	

and marks awarded for each question note against each and totalled.

7. This total should tally with the page-war totals.

8. The aggregate total marks awarded should be noted on the co page ... the righthand corner with a circle.

Top